## 20

# ಅದ್ಭುತಗಳ ಮೂರನೆ ಗುಂಪು

## (9:18-38)

ಈ ಸರಣಿಯಲ್ಲಿ ಮುಂದಿನ ಮೂರನೆಯ ಮತ್ತು ಅಂತಿಮವಾದ ಅದ್ಭುತಗಳ ಗುಂಪಾಗಿದೆ (9:18-34). ಹಿಂದಿನ ಎರಡು ಗುಂಪಿನ ವಿಷಯದಂತೆಯೇ, ಈ ಗುಂಪಿನಲ್ಲಿಯೂ ಮೂರು ಬೇರೆ ಬೇರೆ ಕಥೆಗಳು ಒಳಗೊಂಡಿದೆ. Douglas R. A. Hare ರವರು ಅವಲೊಕಿಸಿದ ಪ್ರಕಾರ,

> ಎಲ್ಲಾ ಮೂರು ಕಥೆಗಳು "ಎರಡೆರಡು ಅದ್ಭುತಗಳು" ಹೊಂದಿರುತ್ತವೆ. ಮೊದಲನೆಯದು ಸತ್ತ ಹುಡುಗಿಯನ್ನು ಎಬ್ಬಿಸಿದ್ದು ಅದರ ಜೊತೆಯಲ್ಲಿ ರಕ್ತಕುಸುಮ ರೋಗಿಯಾದ ಸ್ತ್ರೀಯನ್ನು ಸ್ವಸ್ಥಮಾಡಿರುವದು ಒಳಗೊಂಡಿದೆ [9:18-26], ಎರಡನೆಯದು ಇಬ್ಬರು ಕುರುಡರು ದೃಷ್ಟಿ ಹೊಂದಿದ್ದು [9:27-31], ಮತ್ತು ಮೂರನೆಯ ರೋಗಿ ಎರಡು ರೀತಿಯ ವೇದನೆ ಹೊಂದಿದ್ದನು, (ಮೂಕನಾಗಿದ್ದನು) ಅವನು ದೆವ್ವ ಕೂಡ ಹಿಡಿದವನಾಗಿದ್ದನು [9:32-34].[1]

ಈ ಕಥೆಗಳಲ್ಲಿ ನಂಬಿಕೆಯೇ ಸಾಮಾನ್ಯವಾದ ಅಂಶವಾಗಿದೆ: ಯೆಹೂದ್ಯ ಸಭಾಮಂದಿರದ ಅಧಿಕಾರಿಯ ನಂಬಿಕೆ ಮತ್ತು ರಕ್ತಕುಸುಮ ಸ್ತ್ರೀಯ ನಂಬಿಕೆ (9:18, 20-22), ಇಬ್ಬರು ಕುರುಡರ ನಂಬಿಕೆ (9:27-29), ಮತ್ತು ದೆವ್ವಹಿಡಿದವನು ಸ್ವಸ್ಥನಾಗುವದನ್ನು ನೋಡಿದವರ ನಂಬಿಕೆ (9:32, 33).[2]

### ರಕ್ತಕುಸುಮ ಸ್ತ್ರೀ ಸ್ವಸ್ಥವಾಗಿದ್ದು ಮತ್ತು ಯಾಯಿರನ ಮಗಳನ್ನು ಬದುಕಿಸಿದ್ದು (9:18-26)

**18ಹೀಗೆ ಆತನು ಅವರೊಂದಿಗೆ ಮಾತಾಡುತ್ತಿರುವಾಗ ಒಬ್ಬ ಅಧಿಕಾರಿ ಬಂದು ಆತನಿಗೆ
ಅಡ್ಡಬಿದ್ದು - ನನ್ನ ಮಗಳು ಈಗಲೇ ತೀರಿಹೊದಳು; ಆದಾಗ್ಯೂ ನೀನು ಬಂದು ಆಕೆಯ
ಮೇಲೆ ಕೈ ಇಟ್ಟರೆ ಬದುಕುವಳು ಎಂದು ಬೇಡಿಕೊಳ್ಳಲು 19ಯೇಸು ಎದ್ದು ತನ್ನ ಶಿಷ್ಯರನ್ನು
ಕರಕೊಂಡು ಅವನ ಹಿಂದೆ ಹೋದನು.**

**20ಅಷ್ಟರಲ್ಲಿ ಹನ್ನೆರಡು ವರುಷದಿಂದ ರಕ್ತಕುಸುಮ ರೋಗವಿದ್ದ ಒಬ್ಬ ಹೆಂಗಸು -
21ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು ಎಂದು ಮನಸ್ಸಿನಲ್ಲಿ
ಅಂದುಕೊಂಡು ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು. 22ಆಗ
ಯೇಸು ಹಿಂತಿರುಗಿ ಆಕೆಯನ್ನು ನೋಡಿ - ಮಗಳೇ, ಧೈರ್ಯವಾಗಿರು; ನಿನ್ನ ನಂಬಿಕೆಯೇ
ನಿನ್ನನ್ನು ಸ್ವಸ್ಥಮಾಡಿತು ಅಂದನು. ಆ ಕ್ಷಣವೇ ಆ ಹೆಂಗಸು ಸ್ವಸ್ಥವಾದಳು.**

**23ಆ ಮೇಲೆ ಯೇಸು ಆ ಅಧಿಕಾರಿಯ ಮನೆಗೆ ಬಂದು ವಾದ್ಯಗಾರರನ್ನೂ ಗದ್ದಲ
ಮಾಡುವ ಜನರ ಗುಂಪನ್ನೂ 24ಕಂಡು - ಹೊರಗೆ ಹೋಗಿರಿ; ಹುಡುಗಿ ಸತ್ತಿಲ್ಲ, ನಿದ್ದೆ
ಮಾಡುತ್ತಿದ್ದಾಳೆ ಅನ್ನಲು ಅವರು ಆತನನ್ನು ಹಾಸ್ಯಮಾಡಿದರು. 25ಜನರನ್ನು ಹೊರಕ್ಕೆ
ಕಳುಹಿಸಿದ ಮೇಲೆ ಆತನು ಒಳಕ್ಕೆ ಹೋಗಿ ಆಕೆಯ ಕೈ ಹಿಡಿಯಲು ಆಕೆ ಎದ್ದಳು. 26ಈ
ಸುದ್ದಿ ಆ ದೇಶದೊಳಗೆಲ್ಲಾ ಹಬ್ಬಿತು.**

ಈ ಸಂಕ್ಷಿಪ್ತ ಕಥೆಯು ಮೊದಲನೆ ಶತಮಾನದಲ್ಲಿ ಯೆಹೂದ್ಯ ಸಮಾಜದಿಂದ ತಿರಸ್ಕರಿಸಲ್ಪಟ್ಟವರಾಗಿದ್ದ ಸ್ತ್ರೀ ಮತ್ತು ಮಕ್ಕಳಿಗಾಗಿ ಯೇಸುವಿಗೆ ಇರುವ ಕರುಣೆ ಕುರಿತು ಪ್ರದರ್ಶಿಸುತ್ತದೆ. ಇತರೆ ಸುವಾರ್ತೆಗಳಿಗೆ ಹೋಲಿಸಿದಾಗ ಮತ್ತಾಯನಲ್ಲಿರುವ ಈ ಕಥೆ ಬಹಳ ಸಂಕ್ಷಿಪ್ತವಾಗಿ ಹೇಳಲಾಗಿದೆ. ಈ ಕಥೆಗಾಗಿ ಮಾರ್ಕನು ಇಪ್ಪತ್ತು ಮೂರು ವಚನಗಳನ್ನು ಸಮರ್ಪಿಸಿದ್ದಾನೆ (ಮಾರ್ಕ 5:21-43); ಲೂಕ ಸುವಾರ್ತೆಯಲ್ಲಿ ಇದನ್ನು ಹೇಳಲು ಹದಿನೇಳು ವಚನಗಳನ್ನು ತೆಗೆದುಕೊಂಡಿದ್ದಾನೆ (ಲೂಕ 8:40-56), ಆದರೆ ಮತ್ತಾಯನು ಕೇವಲ ಒಂಬತ್ತು ವಚನಗಳನ್ನು ತೆಗೆದುಕೊಂಡಿದ್ದಾನೆ.

**ವಚನ 18.** ಯೇಸು ಉಪವಾಸದ ಕುರಿತು ಯೋಹಾನನ ಶಿಷ್ಯರೊಂದಿಗೆ ಮಾತಾಡುತ್ತಿರುವಾಗ, **ಯೆಹೂದ್ಯ ಮಂದಿರದ ಒಬ್ಬ ಅಧಿಕಾರಿಯು ಬಂದು ಆತನಿಗೆ ಅಡ್ಡಬಿದ್ದನು.** "ಯೆಹೂದ್ಯ ಮಂದಿರ" NASBಯಿಂದ ಸೇರಿಸಲಾಗಿದೆ, ಬಹುಶಃ ಮಾರ್ಕ ಮತ್ತು ಲೂಕ ಸುವಾರ್ತೆಯಲ್ಲಿರುವ ಸಮಾನತೆಯ ವಿಷಯಕ್ಕನುಗುಣವಾಗಿ ಸೇರಿಸಲಾಗಿದೆ. ಮತ್ತಾಯನು ಆ "**ಅಧಿಕಾರಿ**" (*archōn*),ಯ ಹೆಸರನ್ನು ಕೊಟ್ಟಿರುವದಿಲ್ಲ, ಆದರೆ ಲೂಕನು ತನ್ನ ಓದುಗರಿಗೆ ಅವನ ಹೆಸರು ಯಾಯಿರನೆಂದು ಅವನು "ಯೆಹೂದ್ಯ ಮಂದಿರದ ಆಡಳಿತಗಾರನಾಗಿದ್ದನು" (ಲೂಕ 8:41; NIV) ಎಂದು ಹೇಳುತ್ತಾನೆ. ಯಾಯಿರನು "ಯೆಹೂದ್ಯ ಮಂದಿರದ ಆಡಳಿತಗಾರರಲ್ಲಿ ಈತನು ಒಬ್ಬನು" (ಮಾರ್ಕ 5:22; NIV) ಎಂದು ಮಾರ್ಕನು ಹೇಳುತ್ತಾನೆ. ಕೆಲವು ಯೆಹೂದ್ಯ ಮಂದಿರಗಳಲ್ಲಿ ದೊಡ್ಡ ಹಿರಿಯರ ಗುಂಪಿನಿಂದ ಬಹುತ್ವ ಆಡಳಿತಗಾರರನ್ನು ಆರಿಸಿಕೊಳ್ಳುತ್ತಿದ್ದರು.

ಕಪೆರ್ನೌಮಿನಲ್ಲಿರುವ ಯೆಹೂದ್ಯ ಮಂದಿರದಲ್ಲಿ ಅನೇಕ ಅಧಿಕಾರಿಗಳಲ್ಲಿ ಯಾಯಿರನು ಉನ್ನತ ಶ್ರೇಣಿ ಹೊಂದಿದವನಾಗಿದ್ದನು. ಇವರು ಮಂದಿರದಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮಗಳಿಗೆ ಜವಾಬ್ದಾರರಾಗಿರುವರು (4:23; 8:5ರ ಮೇಲಿನ ವ್ಯಾಖ್ಯಾನ ನೋಡಿರಿ). ಈ ಮನುಷ್ಯ, ಕಪೆರ್ನೌಮಿನಲ್ಲಿ ಚೆನ್ನಾಗಿ ಗೊತ್ತಿರುವವನು ಮತ್ತು ಗೌರವವುಳ್ಳವನಾಗಿದ್ದನು, ಈತನು ಬಂದು ತಗ್ಗಿದವನಾಗಿ "ಯೇಸುವಿನ ಮುಂದೆ ಬಂದು **ಅಡ್ಡಬಿದ್ದನು.**" "**ಅಡ್ಡ ಬಿದ್ದನು**" ಎಂದು ಅರ್ಥಕೊಡುವ ಗ್ರೀಕ್ ಶಬ್ದ (*proskuneō*) "**ಆರಾಧಿಸು**" ಅಥವಾ "**ಗೌರವ ಕೊಡು**" ಎಂದು ಅರ್ಥಕೊಡುತ್ತದೆ (2:2ರ ಮೇಲಿನ ವ್ಯಾಖ್ಯಾನ ನೋಡಿರಿ). ಈ ಸನ್ನಿವೇಶದಲ್ಲಿ, ಎರಡನೆಯ ಅರ್ಥ ಹೆಚ್ಚಾಗಿ ಸರಿಯಾಗಿರುತ್ತದೆ.

**ನನ್ನ ಮಗಳು ಈಗಲೇ ಸತ್ತು ಹೋದಳು; ಆದಾಗ್ಯೂ ನೀನು ಬಂದು ಆಕೆಯ ಮೇಲೆ ಕೈ ಇಟ್ಟರೆ ಬದುಕುವಳು** ಎಂದು ಹತಾಶೆ ಭಾವನೆಯಲ್ಲಿ, ಯಾಯಿರನು ಯೇಸುವಿಗೆ ಹೇಳಿದನು. ಯೇಸು ಕಪೆರ್ನೌಮಿನಲ್ಲಿ ಅದ್ಭುತಕಾರ್ಯಗಳನ್ನು ಮಾಡಿದನು, ಆತನು ಸ್ವಸ್ಥಮಾಡುವವನು ಎಂಬ ಪ್ರಸಿದ್ಧಿಯನ್ನು ಸ್ಥಾಪಿಸಿದನು. ಇದಕ್ಕೆ ಮುಂಚಿತವಾಗಿ, ಕಪೆರ್ನೌಮಿನ ಹಿರಿಯನು ರೋಮ ಸೈನ್ಯದ ಶತಾಧಿಪತಿಯ ಆಳನ್ನು ಪಾರ್ಶ್ವವಾಯುನಿಂದ ಸ್ವಸ್ಥಮಾಡಲು ಯೇಸುವನ್ನು ಕೇಳಿಕೊಂಡನು (8:5ರ ಮೇಲಿನ ವ್ಯಾಖ್ಯಾನ ನೋಡಿರಿ). ಹೀಗಿದ್ದರೂ, ಆ ಸಮಯದಿಂದ ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವಿನ ಸೇವೆಯನ್ನು ವಿರೋಧಿಸಲು ಪ್ರಾರಂಭಿಸಿದರು (9:3, 11). ಯಾಯಿರನು, ಯಾವುದಾದರೊಂದು ಧಾರ್ಮಿಕತೆಯಿಂದ ವಿರೋಧ ಬರುವ ಸಾಧ್ಯತೆ ಇದೆ ಎಂದು ಸಂಪೂರ್ಣ ಎಚ್ಚರದಿಂದ ಇದ್ದನು, ಹತಾಶೆಯಿಂದ ಯೇಸುವಿನ ಸಹಾಯವನ್ನು ಕೇಳಿಕೊಂಡನು.[3]

ಯೇಸು ತನ್ನ ಮನೆಗೆ ಬಂದು ತನ್ನ ಮಗಳನ್ನು ಬದುಕಿಸಬೇಕೆಂದು ಕೇಳಲು ಈ ಅಧಿಕಾರಿ ಬಂದನು. ಯೇಸು ತನ್ನ ಮನೆಗೆ ಬರುವಂತೆ ಅಂಗಲಾಚಿ ಬೇಡಿಕೊಳ್ಳುವದರಲ್ಲಿ ಆತನ ವಿಸ್ತಾರವಾದ ಹಂಬಲವು ಕಾಣಿಸುತ್ತದೆ (ಲೂಕ 8:41). ಅಧಿಕಾರಿಯು ತನ್ನ ಕರುಣೆಯ ಹೃದಯದಿಂದ "ನನ್ನ ಚಿಕ್ಕ ಮಗಳು" ಎಂದು ಸೂಚಿಸಿದ್ದಾನೆ (ಮಾರ್ಕ 5:23). ಲೂಕನ ಪ್ರಕಾರ 8:42, ಯಾಯಿರನ ಮಗಳು "ಹನ್ನೆರಡು ವರ್ಷದವಳಾಗಿದ್ದಳು" ಮತ್ತು "ಸಾಯುವ

ಸ್ಥಿತಿಯಲ್ಲಿದ್ದಳು.'' ಹೀಗಿರುವಾಗಲೂ, ಆಕೆಯು ಈಗಾಗಲೇ ಸತ್ತಿದ್ದಾಳೆ ಎಂದು ಮತ್ತಾಯನು ಹೇಳುತ್ತಾನೆ. ಈ ವ್ಯತ್ಯಾಸವನ್ನು ನಾವು ಹೇಗೆ ಒಂದುಗೂಡಿಸುತ್ತವೆ? (1) ''ಮತ್ತಾಯನ ವಿಸ್ತಾರವಾದ ಹೇಳಿಕೆಯು ಸತ್ಯವೇದ ದಲ್ಲಿ ತೆಗೆದುಕೊಂಡಿರುವ ವಾಕ್ಯಭಾಗ ಸಂಕ್ಷಿಪ್ತವಾಗಿದೆ (ಭಾಗವಾಗಿದೆ)''[4] ಎಂಬುದು ವ್ಯತ್ಯಾಸವನ್ನು ಸರಳಗೊಳಿಸಬಹುದು. (2) ''ಆ ತಂದೆ ಆಕೆಯು ಸಾಯುತ್ತಿರುವಾಗ ಬಿಟ್ಟು ಬಂದನು, ಮತ್ತು ಆತನು ಯೇಸುವಿನಲ್ಲಿ ಬರುವದರೊಳಗೆ ಆಕೆಯು ಬಹುಶಃ ಸತ್ತು ಹೋಗಿರುತ್ತಾಳೆ ಎಂದು ತಂದೆ ತಿಳಿದುಕೊಂಡಿದ್ದನು''[5] ಎಂದು H. Leo Boles ರವರು ಹೇಳಿದಂತೆಯೇ ನಡೆದಿರುವ ಸಾಧ್ಯತೆಯಿದೆ. (3) ಮೂರನೆಯ ಸಾಧ್ಯತೆಯು William Hendriksen ರವರಿಂದ ವಾದಿಸಲಾಗಿದೆ:

> ಮಾರ್ಕ ಮತ್ತು ಲೂಕನ ಪ್ರಕಾರ, ಮಗುವನ್ನು ಗುಣಪಡಿಸುವಂತೆ ಮೊದಲು ಯಾಯಿರನು ಕೇಳಿದ್ದಾನೆ; ತರುವಾಯ, ಯಾವಾಗ ಆತನು ಆಕೆಯ ಮರಣದ ಕುರಿತು ಹೇಳಿದನೋ, ಆಗ ಕರ್ತನು ಅವನಿಗೆ ಕಳವಳಗೊಳ್ಳಬೇಡ ನಂಬಿಕೆ ಇರಲಿ ಎಂದನು. ಅದರಿಂದ ಈಗ ಆತನು ತನ್ನ ಬೇಡಿಕೆಯನ್ನು ಬದಲಾಯಿಸಿದ ರೂಪದಲ್ಲಿ, ಹೆಸರನ್ನು ತೆಗೆದುಕೊಂಡು ಯೇಸು ಸತ್ತ ಹುಡುಗಿಯ ಮೇಲೆ ಕೈ ಇಡಬಹುದು, ಮತ್ತು ''ಆಕೆ ಬದುಕುವಳು'' ಎಂದು ಸೇರಿಸಿ ಹೇಳಿದನು.[6]

ಕರ್ತನು ಗುಣಪಡಿಸುವನು ಮತ್ತು ಸತ್ತವರನ್ನು ಎಬ್ಬಿಸುವದಕ್ಕೆ ಸಾಮರ್ಥ್ಯವುಳ್ಳವನು ಎಂದು ಯಾಯಿರನು ದೊಡ್ಡ ನಂಬಿಕೆಯನ್ನು ತೋರಿಸಿದನು. ನಮಗೆ ತಿಳಿದಂತೆಯೇ, ಯೇಸು ತನ್ನ ಸೇವೆಯಲ್ಲಿ ಈ ಘಟನೆಯಾಗುವವರೆಗೆ ಯಾರನ್ನು ಸತ್ತವರಿಂದ ಎಬ್ಬಿಸಿರಲಿಲ್ಲ ಇದರ ನಿಮಿತ್ತ ಇದು ಮರೆಯಲಾರದ ಸಂಗತಿಯಾಗಿತ್ತು.

**ವಚನ 19.** ಯೇಸು ಆ ಮನುಷ್ಯನ ಕೋರಿಕೆಗೆ ತಕ್ಷಣ ಪ್ರತಿಕ್ರಿಯಿಸಿ ಎದ್ದು **ತನ್ನ ಶಿಷ್ಯರನ್ನು** ಕರೆದುಕೊಂಡು ಅವನ ಹಿಂದೆ ಹೋದರು ಆತನ ಶಿಷ್ಯರು ಸಹ ಹಿಂಬಾಲಿಸಿದರು.

**ವಚನಗಳು 20, 21.** ಅವರು ಯಾಯಿರನ ಮನೆಗೆ ಹೋಗುತ್ತಿರುವಾಗ ಜನರ ಗುಂಪು ''ಆತನ ಮೇಲೆ ನೂಕಿಕೊಂಡು'' ಯೇಸುವಿನ ಹಿಂದೆ ಹೋಗುತ್ತಿದ್ದರು (ಮಾರ್ಕ 5:24). ಈ ಗುಂಪಿನಲ್ಲಿ ಯೇಸುವನ್ನು ಮುಟ್ಟಿ ಗುಣ ಹೊಂದಲು ನಿರಾಶೆಯುಳ್ಳ **ಒಬ್ಬ ಹೆಂಗಸು** ಇದ್ದಳು. **ಆಕೆಯು ಹನ್ನೆರಡು ವರುಷದಿಂದ ರಕ್ತಕುಸುಮ ರೋಗದಿಂದ ಬಳಲುತ್ತಿದ್ದಳು.** ''ರಕ್ತಕುಸುಮ ರೋಗ'' ಎಂದು ಹೇಳುವ ಗ್ರೀಕ್ ಪದ (*haimorroeō*), ಯಾಜಕಕಾಂಡ 15:33ರಲ್ಲಿ (LXX) ಕಂಡು ಬರುತ್ತದೆ, ಬಹುಶಃ ತಿಂಗಳು ತಿಂಗಳಿನ ಮುಟ್ಟಿನ ಸಮಸ್ಯೆ ಇರಬಹುದು. ''ಹೆಂಗಸಿನ ಮುಟ್ಟಿನಲ್ಲಿ ಬಹಳವಾಗಿ ಬದಲಾವಣೆ ಆಗಿರುವದನ್ನು ಇದು ಸೂಚಿಸುತ್ತದೆ, ತಿಂಗಳು ತಿಂಗಳಿಗೆ ಆಗುವ ಮುಟ್ಟಿನ ಈ ಸಮಸ್ಯೆ ತಿಳಿಯದ ರೀತಿಯಲ್ಲಿಯೇ ಅನಿಯಮಿತವಾಗಿ ವಿಸ್ತಾರಗೊಂಡು, ಸಾಮಾನ್ಯವಾಗಿ ಇದು ರಕ್ತ ಹೀನತೆ ಉಂಟುಮಾಡುತ್ತದೆ''[7] ಎಂದು J. Wilkins ರವರು ಬರೆದಿದ್ದಾರೆ.

ಆ ಹೆಂಗಸಿನ ದುಃಖದ ಸ್ಥಿತಿ ಆಕೆಯ ದೈಹಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿಯೂ, ಮತ್ತು ಧಾರ್ಮಿಕವಾಗಿಯೂ ಪರಿಣಾಮ ಬೀರಿತು. ''ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ ಕೈಯಲ್ಲಿದದ್ದನೆಲ್ಲ ಕಳಕೊಂಡಳು'' (ಮಾರ್ಕ 5:26) ಮತ್ತು ''ಆಕೆಯು ಅವರಲ್ಲಿ ಯಾರಿಂದಲೂ ಗುಣ ಹೊಂದಲಿಲ್ಲ'' (ಲೂಕ 8:43). ಈ ವೈದ್ಯರು ಬಹುಶಃ ನಕಲಿ ವೈದ್ಯರಾಗಿದ್ದು ರೋಗಿಯನ್ನು ಹಿಂಸಿಸಿರಬಹುದು. ಆಕೆಯು ಗುಣಹೊಂದುವ ಪ್ರಯತ್ನದಲ್ಲಿ ತನ್ನ ಕೈಯಲ್ಲಿರುವ ಹಣವೆಲ್ಲ ಕಳೆದುಕೊಂಡಿದ್ದಳು (ಮಾರ್ಕ 5:26).

ಆಕೆಯು ಸಮಸ್ಯೆಗಾಗಿ ಸ್ವಸ್ಥತೆ ಹೊಂದುವದು ಕಾಣದೆ ಇರುವದರಿಂದ, ಆ ಹೆಂಗಸು ನಿರಂತರವಾಗಿ ಧಾರ್ಮಿಕ ಆಚರಣೆಯ ಪ್ರಕಾರ ಅಶುದ್ಧಳಾಗಿದ್ದಳು - ಈ ಪರಿಸ್ಥಿತಿಯು ಈಕೆಗೆ ನಾಚಿಕೆ ಮತ್ತು ಅತಿ ದುಃಖ ತಂದಿತು. ಆಕೆಯು ಯಾರಿಗಾದರು ಅಥವಾ ಏನಾದ್ರು

ಮುಟ್ಟಿದರೂ ಅದು ಅಚರಣೆಯ ವಿಧಿ ಪ್ರಕಾರ ಅಶುದ್ಧವಾಗುತ್ತಿತ್ತು (ಯಾಜಕಕಾಂಡ 15:19-27). ಈ ಸ್ಥಿತಿಯು ಆಕೆಗೆ ಹದಿ ವಯಸ್ಸಿನಲ್ಲಿಯೇ ಇದ್ದಿದ್ದಾದರೆ ಆಕೆ ಮದುವೆಯನ್ನು ಆಪೇಕ್ಷಿಸತಕ್ಕವಳಾಗಿರಲಿಲ್ಲ. ಆಕೆ ಮದುವೆಯಾದ ಮೇಲೆ ಈ ರೋಗ ಬಂದಿದ್ದಾದರೆ, ಗಂಡ ಮತ್ತು ಹೆಂಡತಿ ಲೈಂಗಿಕ ಸಂಬಂಧದಲ್ಲಿ ಒಂದಾಗುವದು ನಿಯಮ ಬಾಹಿರವಾಗುತ್ತದೆ (ಯಾಜಕಕಾಂಡ 18:19). ಅದರ ಫಲಿತವಾಗಿ, ಆಕೆಗೆ ಮಕ್ಕಳಿರುವದಿಲ್ಲ, ಅಂಥಹಾ ಒಂದು ಪರಿಸ್ಥಿತಿಯಲ್ಲಿ ಕೆಲವು ಸಾರಿ ವಿಚ್ಛೇದನ ಕೂಡ ಆಗುತ್ತದೆ. ಆಕೆಯು ಅಶುದ್ಧ ಪರಿಸ್ಥಿತಿಯಲ್ಲಿ, ಆಕೆಯು ಆರಾಧಿಸುವದಕ್ಕೆ ದೇವಾಲಯದೊಳಕ್ಕೆ ಮತ್ತು ಸಾರ್ವಜನಿಕ ಮಾರುಕಟ್ಟೆ ಸ್ಥಳಗಳಲ್ಲಿ ಹೊಗಬಾರದಾಗಿತ್ತು. ಆಕೆಯು ಬಡ ಸ್ತ್ರೀಯಾಗಿದ್ದು ಎಲ್ಲಾ ಕಡೆಯಿಂದಲೂ ಬಾದಿಸಲ್ಪಟ್ಟಳು.

ಆಕೆಯು ಕಾಣಿಸಿಕೊಳ್ಳುವದು ಬೇಕಾಗಿರಲಿಲ್ಲ, ಅದರಿಂದ **ಆಕೆ ಯೇಸುವಿನ ಹಿಂದೆ** ಬಂದಳು. ಯೆಹೂದ್ಯ ಮಂದಿರದ ಅಧಿಕಾರಿ ಧೈರ್ಯದಿಂದ ಯೇಸುವಿನ ಮುಂದೆ ಬಂದು ಮೊಣಕಾಲೂರಿರುವದು ಆಕೆಯು ಭಯದಿಂದ ಗುಪ್ತವಾಗಿ ಬಂದಿರುವದು ಭಿನ್ನವಾಗಿ ನಿಲ್ಲುತ್ತದೆ (9:18). **ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು** ಎಂದು ನಂಬಿ ಆಕೆ ಯೇಸುವಿನ ಗುಣಪಡಿಸುವ ಶಕ್ತಿಯಲ್ಲಿ ನಂಬಿಕೆಯಿಟ್ಟಳು (ನೋಡಿರಿ 14:36; ಅಪೊಸ್ತಲರ ಕೃತ್ಯಗಳು 5:15; 19:11, 12).

**ಆತನ ಉಡುಪಿನ ಗೊಂಡೆ** ಎಂಬುವದು ಯೆಹೂದ್ಯ ಜನರು ದೇವರ ಜನರೆಂದು ನೆನಪಿಸುವಂತೆ ಹೊರಗಡೆ ಮೇಲ್ಭಾಗದಲ್ಲಿ ಹಾಕುವ ಉಡುಪಿನ ಗೊಂಡೆಗಳ ಇಳಿಬಿಡುವಿಕೆಯನ್ನು ಸೂಚಿಸುತ್ತದೆ (ಅರಣ್ಯಕಾಂಡ 15:37-41; ಧರ್ಮೋಪದೇಶ ಕಾಂಡ 22:12; ನೋಡಿರಿ ಮತ್ತಾಯ 14:36; 23:5). ಆಕೆ ಯಾವಾಗ ಯೇಸುವಿನ ಉಡುಪಿನ ಗೊಂಡೆ ಮುಟ್ಟಿದಳೋ, "ಮುಟ್ಟಿದ ಕೂಡಲೇ ಆಕೆಗೆ ರಕ್ತ ಹರಿಯುವದು ನಿಂತುಹೋದದರಿಂದ ಆಕೆಯು - ನನ್ನನ್ನು ಕಾಡಿದ ರೋಗವು ಹೋಗಿ ನನಗೆ ಗುಣವಾಯಿತೆಂದು ತನ್ನೊಳಗೆ ತಿಳಿದುಕೊಂಡಳು" (ಮಾರ್ಕ 5:29). ಆ ಹೆಂಗಸು ಗುಣವಾಗುವದನ್ನು ತಿಳಿದುಕೊಂಡಳು, ಮತ್ತು ಯೇಸು ಸಹ ತಿಳಿದುಕೊಂಡನು. ಆತನು "ತನ್ನಿಂದ ಶಕ್ತಿಯು ಹೊರಟಿತೆಂದು ತನ್ನಲ್ಲಿ ತಿಳಿದುಕೊಂಡನು" (ಮಾರ್ಕ 5:30).

**ವಚನ 22.** ಆಗ ಯೇಸು ಜನರ ಕಡೆಗೆ ತಿರುಗಿಕೊಂಡು ಪ್ರಾಯಶಃ ಕಠಿಣವಾಗಿ, "ನನ್ನ ಉಡುಪನ್ನು ಯಾರು ಮುಟ್ಟಿದರು?" ಎಂದು ಕೇಳಿದನು (ಮಾರ್ಕ 5:30). ಜನರು ಆ ರೀತಿಯಲ್ಲಿ ಆತನ ಮೇಲೆ ನೂಕುತ್ತಾ ಇರುವಾಗ ಈತನು ಇಂಥಹಾ ಪ್ರಶ್ನೆ ಕೇಳುತ್ತಾನಲ್ಲಾ ಎಂದು ಶಿಷ್ಯರು ದಿಗ್ಭ್ರಾಂತರಾದರು (ಮಾರ್ಕ 5:31). ಆತನ ಪ್ರತಿಕ್ರಿಯೆಗೆ "ಆ ಹೆಂಗಸು ಅಂಜಿ ನಡುಗುತ್ತಾ ಬಂದು ಆತನಿಗೆ ಅಡ್ಡಬಿದ್ದು ಇದ್ದ ಸಂಗತಿಯನ್ನೆಲ್ಲಾ ಹೇಳಿದಳು" (ಮಾರ್ಕ 5:33). ಅಶುದ್ಧಳಾಗಿರುವ ಉದ್ದೇಶಪೂರ್ವಕವಾಗಿ ಪರಿಶುದ್ಧನಾದ ದೇವರ ಮನುಷ್ಯನನ್ನು ಬಹಿರಂಗವಾಗಿ ಮುಟ್ಟುವದರಿಂದ ಆಕೆ ಬಂದು ಸಾರ್ವಜನಿಕರೆಲ್ಲರೂ, ನೋಡುವಂತಾಯಿತು ಎಂದು ಭಯಗೊಂಡಿರುವದು ನಿಸ್ಸಂದೇಹವಾಗಿದೆ.

ಯೇಸು ಆಕೆಗೆ ಪುನಃ ಭರವಸೆಯಿಂದ **ಮಗಳೇ, ಧೈರ್ಯವಾಗಿರು; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು ಅಂದನು.** "ಧೈರ್ಯವಾಗಿರು" ಎನ್ನುವ ಮಾತು ಇದಕ್ಕಿಂತ ಮೊದಲು ಯೇಸು ಪಾರ್ಶ್ವವಾಯುವಿಗೆ ಹೇಳಿರುವದು ನಮಗೆ ನೆನಪು ತರುವಂಥದ್ದಾಗಿದೆ: "ಮಗನೇ, ಧೈರ್ಯವಾಗಿರು" (9:2). ಭಯಪಡುವ ಈ ಹೆಂಗಸಿಗೆ ಯೇಸು ಆಕೆಗೆ ಬೇಕಾಗುವ ನೆಮ್ಮದಿ ಮತ್ತು ಪರಿಹಾರ ಕೊಟ್ಟನು. ಆಕೆಯು ಕಾಯಿಲೆಯಲ್ಲಿದ್ದರೂ ಆಕೆಯು ಬಹಳಾ ಶ್ರೇಷ್ಠವಾಗಿರುವ ವ್ಯಕ್ತಿಯೆಂದು ಆತನ ಮಾತುಗಳು ಪುನಃ ಭರವಸೆ ಕೊಟ್ಟವು. ಆಕೆಯ "ನಂಬಿಕೆ"ಯನ್ನು ಪ್ರಶಂಸಿಸಿದ್ದಾನೆ. ಆಕೆಯ ಬಲಹೀನತೆಯನ್ನು ಗುಣಪಡಿಸುವ ಶಕ್ತಿ ಯೇಸುವಿನಲ್ಲಿದೆ ಎನ್ನುವ ಆಕೆಯ ನಂಬಿಕೆಯೇ ಆತನ ಉಡುಪನ್ನು ಮುಟ್ಟುವ ಕಾರ್ಯಕ್ಕೆ ನಡೆಸಿತು. ಅದರ ಫಲಿತವಾಗಿ, ಆಕೆಯು ದೇವರಿಂದ "ಸ್ವಸ್ಥವಾದಳು." ಆ ಹೆಂಗಸು ಯೇಸುವಿನ ಉಡುಪಿನ

ಗೊಂಡೆಯನ್ನು ಮುಟ್ಟಿದ ಕೂಡಲೆ "ಗುಣವಾದಳು" ಎಂದು ಮಾರ್ಕ 5:29 ಮತ್ತು ಲೂಕ 8:44 ವಚನಗಳು ಹೇಳುತ್ತವೆ. "ಗುಣವಾಯಿತು" (*sōizō*) ಎಂದು ಅನುವಾದಿಸಿದ ಗ್ರೀಕ್ ಕ್ರಿಯಾಪದವು ಪದೇಪದೇ ಆತ್ಮೀಕ ರಕ್ಷಣೆಗೆ ಸಂಬಂಧಿಸಿರುವ ಸನ್ನಿವೇಶವನ್ನು ಚರ್ಚಿಸುವಾಗ "ರಕ್ಷಿಸು" ಎಂದು ಅನುವಾದಿಸಲಾಗಿದೆ. ಆ ಶಬ್ದದ ಬಳಕೆಯು ವಿಶ್ವಾಸ ಮತ್ತು ರಕ್ಷಣೆ ಮಧ್ಯೆ ಇರುವ ಸಂಬಂಧವನ್ನು ಸೂಚಿಸುತ್ತದೆ.

ಯೇಸು ಆ ಹೆಂಗಸಿಗೆ ಗುಣಪಡಿಸಿದ ತರುವಾಯ, ಅನೇಕ ಜನರು ಬಂದು ಆತನಿಗೆ ಭೇಟಿಯಾದರು, ಬಹುಶಃ ಯಾಯಿರನ ಮನೆಯಿಂದ ಆಳುಗಳು, ಬಂದು ನಿನ್ನ ಮಗಳು ತೀರಿ ಹೊದಳು ಎಂದು ಮಾಹಿತಿ ಕೊಡುತ್ತಿದ್ದಾರೆ (ಮಾರ್ಕ 5:35). ಯೇಸು ಅವರು ಆಡಿದ ಮಾತನ್ನು ಕೇಳಿಸಿಕೊಳ್ಳದವರಂತೆ ಕೇಳಿಸಿಕೊಂಡನು ಮತ್ತು ಯಾಯಿರನಿಗೆ "ಅಂಜಬೇಡ, ನಂಬಿಕೆ ಮಾತ್ರ ಇರಲಿ" ಎಂದು ಒತ್ತಿ ಹೇಳಿದನು (ಮಾರ್ಕ 5:36). ನಂತರ ಈ ಗುಂಪು ಯಾಯಿರನ ಮನೆಯ ಕಡೆಗೆ ಹೋದರು, ಆದರೆ ಈ ಸಮಯದಲ್ಲಿ, ಯೇಸು ತನಗೆ ಬಹಳ ಹತ್ತಿರ ಪೇತ್ರ, ಯಾಕೋಬ, ಯೋಹಾನರನ್ನು ಮಾತ್ರ ಹೊರತುಪಡಿಸಿ ಬೇರೆಯಾರನ್ನು ತನ್ನೊಂದಿಗೆ ಬರಗೊಡಲಿಲ್ಲ (5:37).

**ವಚನ 23.** ಅವರು **ಆ ಅಧಿಕಾರಿಯ ಮನೆಗೆ** ತಲುಪಿದಾಗ, **ಯೇಸು** ಒಂದು **ಗುಂಪನ್ನು** ಸಂದಿಸಿದನು ಮತ್ತು ಹುಡುಗಿಯ ಮರಣವನ್ನು ಸೂಚಿಸುವ ಕೊಳಲಿನ ಶಬ್ದವನ್ನು ಕೇಳಿದನು. ಸಮಾದಿಯ ಉತ್ತರ ಕ್ರಿಯೆಗಳನ್ನು ಮಾಡಲು ಗೋಳಾಡುವ ಕಸುಬುದಾರರನ್ನು ಬಾಡಿಗೆಗೆ ತೆಗೆದುಕೊಂಡು ಬಂದಿದ್ದರು; ಅವರಲ್ಲಿ ಕೊಳಲು ಊದುವವರು ಮತ್ತು ಗೋಳಾಡುವ ಹೆಂಗಸರು ಇದ್ದರು (ಯೆರೆಮೀಯ 9:17, 18; 48:36; ಆಮೋಸ 5:16).[8] ಒಂದು ಯೆಹೂದ್ಯ ಪಂಡಿತರ ಸಂಪ್ರದಾಯ ಹೇಳುವಂತೆ ಒಬ್ಬ ಕಡುಬಡವ ಇಸ್ರಾಯೇಲ ವ್ಯಕ್ತಿಯ ಹೆಂಡತಿ ತೀರಿ ಹೋದಾಗ, ಆತನು ಇಬ್ಬರು ಕೊಳಲು ಊದುವವರು ಒಬ್ಬಳು ರೋಧನ ಗಾಯಕಿಯನ್ನು ಬಾಡಿಗೆಗೆ ಗೋಳಾಡುವದಕ್ಕಾಗಿ ತರಬೇಕಾಗಿತ್ತು.[9] ಯಾಯಿರನು ಪ್ರಭಾವವುಳ್ಳ ವ್ಯಕ್ತಿಯಾಗಿರುವನೆಂದು ಅವನ ಮನೆಯ ಹತ್ತಿರ **ಗದ್ದಲ ಮಾಡುವ ಜನರ** ಗುಂಪಂತೆ ಅನೇಕ ಗೋಳಾಡುವವರು ಒಟ್ಟಿಗೆ ಯಾಕೆ ಸೇರಿಸಿದರೆಂಬುದು ವಿವರಿಸುತ್ತದೆ. ಕೊಳಲುಗಳನ್ನು ಜೊಂಡು, ಬೆತ್ತ, ಮತ್ತು ಎಲುಬಿನಿಂದ ಮಾಡುತ್ತಾರೆ. ಅದು ಮಾಡುವದು ಸರಳ ಮತ್ತು ಸಾಮಾನ್ಯ ಉಪಯೋಗಕ್ಕೆ ಸುಲಭವಾಗಿರುತ್ತದೆ. ಕೆಲವು ಸಾರಿ ಕೊಳಲು ಊದುವಾಗ "ಚಪ್ಪಾಳೆ ಹಾಕುತ್ತಾ ಅದಕ್ಕೆ ಸ್ವರ ಜೋಡಿಸುವರು."[10]

**ವಚನ 24.** ಗೋಳಾಡುವವರು ಯಾಯಿರನ ಮನೆಯಲ್ಲಿ ವಿಳಂಬ ಮಾಡದೆ ತಕ್ಷಣಕ್ಕೆ ಸೇರಿಬಂದರು ಯಾಕೆಂದರೆ ವ್ಯಕ್ತಿ ಸತ್ತ ದಿನವೇ ಸಮಾದಿ ಮಾಡಬೇಕಿತ್ತು (ಅಪೊಸ್ತಲರ ಕೃತ್ಯಗಳು 5:5, 6, 10). ಹೀಗಿದ್ದರೂ, ಯೇಸು ಎಲ್ಲರಿಗೂ ಆಜ್ಞೆ ಮಾಡಿ, **ಹೊರಗೆ ಹೋಗಿರಿ; ಹುಡುಗಿ ಸತ್ತಿಲ್ಲ, ನಿದ್ದೆ ಮಾಡುತ್ತಾಳೆ ಎಂದನು.** ನಿಜವಾಗಿಯೂ ಆಕೆ ಸತ್ತಿದ್ದಾಳೆ ಎಂದು ಅವರು ತಿಳುಕೊಂಡಿರುವ ಜನರು ಆತನು ಹೇಳುವದನ್ನು ಕೇಳಿ **ಆತನನ್ನು ಹಾಸ್ಯಮಾಡಿದರು** (9:18; ಮಾರ್ಕ 5:35; ಲೂಕ 8:49, 53). ಯೇಸು ಆಕೆಯು ಮರಣದ ನಿದ್ದೆ ಮಾಡುತ್ತಿದ್ದಾಳೆ ಅದಕ್ಕಿಂತ ಹೆಚ್ಚಿನದು ಏನು ಇಲ್ಲ ಎಂದು ಅರ್ಥೈಸಿರಬಹುದು ಮತ್ತು ಆಕೆಯನ್ನು ಸತ್ತವರೊಳಗಿಂದ ಎಬ್ಬಿಸುವ ಶಕ್ತಿ ಆತನಿಗಿತ್ತು. William Barclay ಹೀಗೆ ವಿವರಿಸಿದ್ದಾರೆ,

> ಬಹುಶಃ ಯೇಸು, ಈ ರೀತಿಯಾಗಿ ಆ ಹುಡುಗಿ ನಿದ್ದೆಮಾಡುತ್ತಿದ್ದಾಳೆ, ಎಂದು ಯೇಸು ಹೇಳುವಾಗ, ನಿಜವಾಗಿಯೂ ಆಕೆ ನಿದ್ರೆ ಮಾಡುತ್ತಿರುವದು ಆತನು ಹೇಳಿದರ ಅರ್ಥ ಬಹುಶಃ ಅದೇ ಆಗಿತ್ತು. ಗ್ರೀಕ್ ಭಾಷೆ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಒಬ್ಬ ಮರಣ ಹೊಂದಿರುವದು ದೀರ್ಘನಿದ್ರೆಯಲ್ಲಿದ್ದಾನೆ ಎಂದು ಹೇಳುವದುಂಟು. ವಾಸ್ತವವಾಗಿ, *Cementry* ಎನ್ನುವ ಪದವು *koimētērion,* ಎಂಬ ಶಬ್ದದಿಂದ ಬಂದಿದೆ, ಅದರ

> ಅರ್ಥ ಮಲಗಿಕೊಂಡಿರುವ ಸ್ಥಳ ಎಂದಾಗುತ್ತದೆ; ಗ್ರೀಕ್‌ನಲ್ಲಿ ನಿದ್ದೆಗೆ ಎರಡು ಶಬ್ದಗಳು ಇವೆ; ಅದರಲ್ಲಿ ಒಂದು *koimasthai,* ಇದನ್ನು ಸ್ವಾಭಾವಿಕ ನಿದ್ದೆಗೂ ಮತ್ತು ಮರಣ ಹೊಂದುವದಕ್ಕೂ ಉಪಯೋಗಿಸುತ್ತಾರೆ; ಇನ್ನೊಂದು ಶಬ್ದ *katheudein,* ಇದನ್ನು ಮರಣ ಹೊಂದಿರುವದಕ್ಕೆ ಹೇಳಲು ಆಗಾಗ್ಗೆ ಉಪಯೋಗಿಸಿಲ್ಲ. ಆದರೆ ಸ್ವಾಭಾವಿಕ ನಿದ್ದೆಗೆ ಅನೇಕ ಸಾರಿ ಉಪಯೋಗಿಸಲಾಗಿದೆ. ಈ ವಾಕ್ಯಭಾಗದಲ್ಲಿ ಇದು *katheudein* ಎನ್ನುವ ಶಬ್ದ ಉಪಯೋಗಿಸಲಾಗಿದೆ.[11]

Jack P. Lewis ಹೀಗೆ ಬರೆದಿದ್ದಾರೆ,

> ಹೊಸ ಒಡಂಬಡಿಕೆಯಲ್ಲಿ ಅನೇಕ ಸಾರಿ ಕಂಡುಬರುವ ನಿದ್ದೆ ಎನ್ನುವ ವಿವರಣೆಯು ಹಳೆ ಒಡಂಬಡಿಕೆಯಿಂದ ತೆಗೆದುಕೊಳ್ಳಲಾಗಿದೆ *(katheudein* ಗಾಗಿ; ದಾನಿಯೇಲ 12:2; 1 ಥೆಸಲೋನಿಕ 5:10; *koimaomai* ಗಾಗಿ: ಯೋಹಾನ 11:11; ಮತ್ತಾಯ 27:52; ಅಪೊಸ್ತಲರ ಕೃತ್ಯಗಳು 7:60; 1 ಕೊರಿಂಥ 15:6; 1 ಥೆಸಲೋನಿಕ 4:13-15). ಅಲಂಕಾರಿಕವು ಪುನರುತ್ಥಾನದ ನಿಶ್ಚಯತೆಯನ್ನು ಒಳಗೊಂಡಿದೆ. ಮರಣ ತಾತ್ಕಾಲಿಕ ಮಾತ್ರ; ಈ ನಿದ್ದೆಯಿಂದ ಎಬ್ಬಿಸಲು ಯೇಸುವಿಗೆ ಶಕ್ತಿಯಿದೆ.[12]

**ವಚನ 25.** ಗೋಳಾಡುವವರು ಹೊರಗೆ ಹೋದಮೇಲೆ, ಆ ಹುಡುಗಿಯ ತಂದೆ ತಾಯಿಯವರು, ಪೇತ್ರ, ಯಾಕೋಬ, ಮತ್ತು ಯೋಹಾನ ಅವರು ಯೇಸುವಿನೊಂದಿಗೆ ಇದ್ದರು ಅವರು ಈ ಅದ್ಭುತಕ್ಕೆ ಸಾಕ್ಷಿಯಾದರು (ಮಾರ್ಕ 5:37, 40). (ತನ್ನ) ಕೈಯನ್ನು ಆಕೆಯ ಮೇಲೆ ಹಾಕು ಎಂಬ ತಂದೆಯ ಮೂಲ ಕೋರಿಕೆ ಯೇಸು ಆ ಹುಡುಗಿಯ **ಕೈ ಹಿಡಿದು** ನೆರವೇರಿಸುತ್ತಿದ್ದಾನೆ (9:18). ಆತನು ಆಕೆಗೆ ಹೇಳಿದ ಮಾತುಗಳನ್ನು ಮತ್ತಾಯನು ಸೂಚಿಸಿರುವದಿಲ್ಲ, ಆದರೆ ಮಾರ್ಕ 5:41ರಲ್ಲಿ, ಯೇಸು "'Talitha kum!' (ಅದರ ಅರ್ಥ 'ಅಮ್ಮಣ್ಣಿ ಏಳನ್ನುತ್ತೇನೆ!')" ಎಂಬುದನ್ನು, ವರದಿ ಮಾಡಿದ್ದಾನೆ. ಇದು ಅರಾಮಿಕ್ ಭಾಷೆಯ ವಾಕ್ಯವಾಗಿದೆ, ಅದನ್ನು ಅಕ್ಷರಾರ್ಥವಾಗಿ, "ಚಿಕ್ಕ ಮಗುವೆ ಎದ್ದೇಳು ಎನ್ನುತ್ತೇನೆ" ಎಂದು ಅನುವಾದಿಸಲಾಗಿದೆ.

ಯೇಸು ಆಕೆಯ ಕೈಯನ್ನು ಹಿಡಿದು ಈ ಮಾತುಗಳನ್ನು ಹೇಳಿದ ತಕ್ಷಣವೇ **ಆಕೆ ಎದ್ದಳು** (ನೋಡಿರಿ ಮಾರ್ಕ 5:42). ಲೂಕ 8:55ರಲ್ಲಿ, *"ಆಕೆಯ ಪ್ರಾಣವು ತಿರುಗಿ ಬಂದು ತಕ್ಷಣವೇ ಆಕೆ ಎದ್ದಳು;* ಮತ್ತು ಆತನು ಈ ಹುಡುಗಿಗೆ ತಿನ್ನಲು ಏನಾದರು ಕೊಡಿರಿ ಎಂದು ಅಪ್ಪಣೆ ಮಾಡಿದನು" ಎಂದು ಸೇರಿಸಲಾಗಿದೆ (ಒತ್ತಿ ಹೇಳಿದ್ದು ನನ್ನದು).

ರಕ್ತಕುಸುಮ ಹೆಂಗಸಿನ ವಿಷಯದಂತೆಯೇ, ಯೇಸು ಇನ್ನೊಂದು ಸಾರಿ ಆತನು ಅಶುದ್ಧವಾದವರನ್ನು ಬೇಟಿಯಾಗುವ ಸಂದರ್ಭ ಬಂತು; ಆತನು ಸತ್ತ ಹುಡುಗಿಯ ಶವವನ್ನು ಮುಟ್ಟಿದನು (ಅರಣ್ಯಕಾಂಡ 19:11-21). ಎರಡು ಸಂದರ್ಭಗಳಲ್ಲಿ, ಆತನೇ ಮಲೀನವಾಗುವ ಬದಲು, ಆತನ ಗುಣಪಡಿಸುವ ಶಕ್ತಿಯಿಂದ ಯೇಸು ಅವರನ್ನು ಶುದ್ಧಗೊಳಿಸಿದನು. ಆತನ ಮುಂದೆ ಇದ್ದ ಪ್ರವಾದಿಗಳಾದ ಎಲಿಯಾ ಮತ್ತು ಎಲಿಷನಂತೆ (1 ಅರಸುಗಳು 17:17-24; 2 ಅರಸುಗಳು 4:17-37), ಮತ್ತು ಆತನ ನಂತರದ ಅಪೊಸ್ತಲರಾಗಿ ಬಂದಿರುವ ಪೇತ್ರ ಮತ್ತು ಪೌಲರಂತೆ (ಅಪೊಸ್ತಲರ ಕೃತ್ಯಗಳು 9:36-42; 20:9-12), ಯೇಸು ಸತ್ತವರನ್ನು ಬದುಕಿಸಿದನು (9:25; ಲೂಕ 7:11-17; ಯೋಹಾನ 11:38-46). ಯೇಸು ಸತ್ತವರನ್ನು ಎಬ್ಬಿಸಿರುವ ವಾಸ್ತವವು ಆತನು ಮೆಸ್ಸೀಯನೆಂದು ಜನರಿಗೆ ತೋರಿಸಿದನು (11:4, 5). ಹೀಗಿದ್ದರೂ, ಆತನ ಶ್ರೇಷ್ಠವಾದ ಎಂದರೆ ಯೇಸು ತಾನೇ ಸಮಾದಿಯಿಂದ ಎದ್ದು ಪುನರುತ್ಥಾನಗೊಂಡಿರುವದು. ಯಾಯಿರನ ಮಗಳನ್ನು ಎಬ್ಬಿಸಿರುವದು ಮೊದಲಿನ ಓದುಗರಿಗೆ ಸಂಶಯವಿಲ್ಲದೆ ಇದನ್ನು "ಅವರ ಸ್ವಂತ ಪುನರುತ್ಥಾನದ ಛಾಯೆ" ಎನ್ನುವದನ್ನು ತೋರಿಸುತ್ತದೆ.[13] ಯೇಸುವಿನಲ್ಲಿದ್ದುಕೊಂಡು "ನಿದ್ರೆ ಹೋಗುವವರನ್ನು" ಸಹ ಆತನು ತಿರುಗಿ

ಬರುವಾಗ ಅವರೆಲ್ಲರನ್ನು ಎಬ್ಬಿಸುವನು (1 ಥೆಸಲೋನಿಕ 4:14, 15).

**ವಚನ 26.** ಅಲ್ಲಿದ್ದವರಿಗೆ ಈ ಅದ್ಭುತದ ಕುರಿತು ಯಾರಿಗೂ ತಿಳಿಯಬಾರದೆಂದು ಯೇಸು ಕಟ್ಟುನಿಟ್ಟಾಗಿ ಆಜ್ಞಾಪಿಸಿದನು (ಮಾರ್ಕ 5:43; ನೋಡಿರಿ ಲೂಕ 8:56). ಆದಾಗ್ಯೂ, **ಈ ಸುದ್ದಿ ಆ ದೇಶದೊಳಗೆಲ್ಲಾ ಹಬ್ಬಿತು.** ಎಲ್ಲಾ ಗೋಳಾಡುವವರು ಈ ಹುಡುಗಿ ಸತ್ತಿದ್ದಾಳೆಂದು ಗೊತ್ತಿದೆ ಅಲ್ಲಿ ಆಗಿರುವ ಅದ್ಭುತವನ್ನು ಯಾರಿಗೂ ತಿಳಿಯದಂತೆ ಗುಪ್ತವಾಗಿಡಲು ಕಷ್ಟಕರವಾಗಿದೆ. ಯಾವಾಗ ಅವರು ಆಕೆ ಪುನಃ ಜೀವಂತವಳಾಗಿದ್ದಾಳೆ ಎಂದು ತಿಳಿದುಕೊಂಡರೋ, ಆ ಸುದ್ದಿ ತಕ್ಷಣವೇ ಯೇಸು ಮರಣದ ಮೇಲೆ ಬಲವನ್ನು ಹೊಂದಿದ್ದಾನೆಂದು ಹಬ್ಬಿತು!

## ಇಬ್ಬರು ಕುರುಡರನ್ನು ಸ್ವಸ್ಥಮಾಡಿದ್ದು (9:27-31)

**[27]ಯೇಸು ಅಲ್ಲಿಂದ ಹೋಗುವಾಗ ಇಬ್ಬರು ಕುರುಡರು - ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು. [28]ಆತನು ಮನೆಗೆ ಬಂದಾಗ ಆ ಕುರುಡರು ಆತನ ಬಳಿಗೆ ಬಂದರು. ಯೇಸು ಅವರನ್ನು - ನಾನು ಇದನ್ನು ಮಾಡಬಲ್ಲೆನೆಂಬದನ್ನು ನಂಬುತ್ತೀರೋ ಎಂದು ಕೇಳಿದ್ದಕ್ಕೆ ಅವರು - ಹೌದು, ಸ್ವಾಮೀ, ನಂಬುತ್ತೇವೆ ಅಂದರು. [29]ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ - ನೀವು ನಂಬಿದಂತೆ ನಿಮಗೆ ಆಗಲಿ ಅಂದನು. ಆಗ ಅವರಿಗೆ ಕಣ್ಣು ಬಂದವು. [30]ಮತ್ತು ಯೇಸು ಅವರಿಗೆ - ಇದು ಯಾರಿಗೂ ತಿಳಿಯಬಾರದು ನೋಡಿರಿ ಎಂದು ಖಂಡಿತವಾಗಿ ಹೇಳಿದನು. [31]ಆದರೆ ಅವರು ಹೊರಟುಹೋಗಿ ಆ ದೇಶದೊಳಗೆಲ್ಲಾ ಆತನ ಸುದ್ದಿಯನ್ನು ಹಬ್ಬಿಸಿದರು.**

**ವಚನ 27.** ಅವರು ಹೆಚ್ಚಾಗಿ ಕರುಣೆ ಮತ್ತು ಸ್ವಸ್ಥೆಗಾಗಿ ಯೇಸುವನ್ನು ಕೇಳಿಕೊಂಡರು ಅದನ್ನು ಕೇಳಿದ ಯೇಸು ದೂರ ಹೋಗದೆ ಅಲ್ಲಿಯೇ ನಿಂತನು: **ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು.**[14] ಕುರುಡು ತನವು ಅನಾರೋಗ್ಯದ ಪರಿಸ್ಥಿತಿ, ರೋಗದ ಸೋಂಕು, ಅಂಗಾಂಗಳು ಹಾನಿಯಾಗಿರುವದು, ಉಸಬು ಬಿದ್ದಿರುವದು, ಅಪಘಾತಗಳು ಯುದ್ಧದಿಂದ ಗಾಯಗಳು, ಸರಿಯಾದ ಪ್ರೋಟಿನ್ ಯುಕ್ತ ಆಹಾರವಿಲ್ಲದೆ ಇರುವದು, ಹುಟ್ಟುವಾಗ ಆಗುವ ಸಮಸ್ಯೆಗಳು ಅಥವಾ ವಿಪರೀತವಾದ ಉಷ್ಣತೆಯಿಂದ ಈ ಕಾರಣಗಳಿಂದ ಬಂದಿರಬಹುದು.

ಕೂಗಿಕೊಳ್ಳು ಎಂದು ಅರ್ಥಕೊಡುವ ಗ್ರೀಕ್ ಶಬ್ದ (*krazō*) ಜೋರಾಗಿ ಕೂಗುವದು ಅಥವಾ ಜೋರಾಗಿ ಕರೆಯುವದು ಎಂದು ಸೂಚಿಸುವ ಪದವಾಗಿದೆ. ಅವರು ಈ ರೀತಿಯಾಗಿ ಕನಿಷ್ಟ ಎರಡು ಕಾರಣಗಳಿಗಾಗಿ ಮಾಡಿರಬಹುದು. ನಿರ್ದಿಷ್ಟವಾಗಿ ಆತನ ಗಮನವನ್ನು ತಮ್ಮ ಕಡೆ ಸೆಳೆಯುವದಕ್ಕಾಗಿ ಮಾಡಿರುತ್ತಾರೆ. ಅದು ಮಾತ್ರವಲ್ಲದೆ, ಬಹುಶಃ ಜನರು ಗುಂಪಲ್ಲಿ ಕೇಳಿಸಿಕೊಳ್ಳುವದಕ್ಕೆ ಪ್ರಯತ್ನಮಾಡಿರಬಹುದು. ಈ ರೀತಿ ಅವರು ಯೇಸುವಿಗೆ ನಮ್ಮ ಮೇಲೆ "ಕರುಣೆ ತೋರಿಸು" ಎಂದು ಕೂಗಿದರು, ಇದು ಮತ್ತಾಯನ ಪ್ರಕಾರ ಸಾಮಾನ್ಯವಾದ ಹೇಳಿಕೆಯಾಗಿದೆ (15:22; 17:15; 20:30, 31). ಅವರು "ದಾವೀದ ಕುಮಾರನೇ" ಎಂದು ಉಪಯೋಗಿಸಿದ್ದರಿಂದ ಇವರು ಸಹಜವಾಗಿ ಯೇಸುವನ್ನು ಮೆಸ್ಸೀಯನೆಂದು ಗುರುತಿಸಿದರು, ಈ ಪದನಾಮವು ಮೆಸ್ಸೀಯನ ಬರೋಣಕ್ಕೆ ಉಪಯೋಗಿಸುವ ಸಾಮಾನ್ಯ ಶಿರೋನಾಮೆಯಾಗಿತ್ತು (1:1; 12:23; 15;22; 20:30, 31; 21:9, 15; 22:42; ಮಾರ್ಕ 10:47, 48; 12:35; ಲೂಕ 18:38, 39; 20:41; ನೋಡಿರಿ 2 ಸಮುವೇಲ 7; ಕೀರ್ತನೆ 89).

ಈ ಇಬ್ಬರು ಕುರುಡರು ಪ್ರಚಾರ ಮಾಡುತ್ತಿರುವ ಮೆಸ್ಸೀಯತ್ವ ಪದನಾಮ ಸೇರಿಸಿಕೊಂಡು, ಯೇಸು ಅವರು ದೃಷ್ಟಿಯನ್ನು ಸ್ವಸ್ಥಮಾಡುವದರಿಂದ, ಆತನ ಮೆಸ್ಸೀಯನಿಗೆ ಸಂಬಂಧಿಸಿದಂತೆ ಬರೋಣಕ್ಕೆ ಎದುರು ನೋಡುವದನ್ನು ನೆರವೇರಿಸಲ್ಪಡಲು ಸೂಚಿಸುತ್ತದೆ. Donald A. Hagner ರವರು ಹೀಗೆ ಸೂಕ್ಷ್ಮವಾಗಿ ಗುರುತಿಸಿದ್ದಾರೆ, "ಸ್ಥಾನಿಕನಾದ

ಯೋಹಾನನು ಬರಬೇಕಾದ ಮೆಸ್ಸೀಯನು ನೀನೋ [ಅಥವಾ ಇಲ್ಲವೋ] ಎಂದು ಪ್ರಶ್ನೆ ಕೇಳಿದಾಗ ಅದಕ್ಕೆ ಉತ್ತರವಾಗಿ ಯೇಸು ಉತ್ತರದ ಪಟ್ಟಿಯಲ್ಲಿ ಮೊದಲನೆಯದಾಗಿ ಕುರುಡ [*tuphloi*] ನನ್ನು ಗುಣಪಡಿಸಿರುವದು ಸೂಚಿಸಲಾಗಿದೆ (11:15)."[15]

**ವಚನ 28.** ಯೇಸು **ಮನೆಗೆ ಬಂದಾಗ**, ಆತನು ಕಪೆರ್ನೌಮಿನಲ್ಲಿ ವಾಸಮಾಡುತ್ತಿದ್ದ ಅದೇ ಸ್ಥಳ ಎಂದು ಊಹೆ ಮಾಡಿಕೊಳ್ಳಲಾಗಿದೆ. ಆ ಇಬ್ಬರು ಕುರುಡರು ಯೇಸುವಿನ ಹಿಂದೆ ಹೋದರು ಮತ್ತು ಅವರನ್ನು ಮನೆಯ ಒಳಗಡೆ ಆಹ್ವಾನಿಸಲ್ಪಟ್ಟರು. ಅವರು ತಮ್ಮ ನಂಬಿಕೆಯನ್ನು ತೋರಿಸಿ ಆ ರೀತಿಯಾಗಿ ಆತನನ್ನು ಕರೆದಿದ್ದಾಗ್ಯೂ (9:27), **ಯೇಸು** ಅವರನ್ನು ಪರೀಕ್ಷಿಸಿದನು: **ನಾನು ಇದನ್ನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ?** ಎಂದು ಕೇಳಿದನು. ಅದಕ್ಕೆ ಅವರು ತಕ್ಷಣವೇ ಪ್ರತಿಕ್ರಯಿಸಿ **ಹೌದು, ಸ್ವಾಮಿ** ಎಂದರು.

**ವಚನ 29.** ಇತರೆ ಕುರುಡರನ್ನು ಸ್ವಸ್ಥಮಾಡುವಾಗ, ಯೇಸು ಅಸಾಧಾರಣವಾದ ಸಂಗತಿಗಳನ್ನು ಮಾಡಿದ್ದಾನೆ (ಮಾರ್ಕ 8:22-26; ಯೋಹಾನ 9:6, 7). ಹೀಗಿದ್ದರೂ, ಈ ಇಬ್ಬರು ಕುರುಡರಿಗೆ, ಅವರ **ಕಣ್ಣುಗಳನ್ನು ಮುಟ್ಟಿದನು** ಮತ್ತು ಅವರಿಗೆ **ನಿನ್ನ ನಂಬಿಕೆ ನಿನ್ನನ್ನು ಸ್ವಸ್ಥಮಾಡಿದೆ ಎಂದನು.** ಮತ್ತೊಂದು ಸಾರಿ, ಯೇಸುವಿನ ಮುಟ್ಟಿದ ಬಲವನ್ನು ಒತ್ತಿ ಹೇಳಲಾಗಿದೆ (8:3, 15; 9:18, 20, 21, 25). ಪ್ರತಿಯೊಂದು ಸ್ವಸ್ಥತೆ ಕಾರ್ಯದಲ್ಲಿ ನಂಬಿಕೆ ಅವಶ್ಯಕತೆ ಇರುವದಿಲ್ಲ, ಯೇಸು ಆಗಾಗ ಹೇಳುವ ಹೇಳಿಕೆಗೆ ಹೋಲಿಕೆಯಾಗುವ ಒಂದು ಹೇಳಿಕೆ ಇಲ್ಲಿದೆ (ನೋಡಿರಿ 8:13; 9:22). ನಿರ್ದಿಷ್ಟವಾದ ವ್ಯಕ್ತಿಯ ಸಮರ್ಪಣೆಯನ್ನು ಪರಿಕ್ಷಿಸುವ ಉದ್ದೇಶ ಇದಾಗಿರಬಹುದು. "ನಂಬಿಕೆಯ ಬೆಳೆವಣಿಗೆಗೆ ಮತ್ತು ನಂಬಿಕೆ ಕೇಂದ್ರಿ ಕರಿಸುವಂತೆ ಮಾಡುವ ಉಪಾಯವಾಗಿದೆ"[16] ಎಂದು D. A. Carson ಹೇಳಿದ್ದಾರೆ.

**ವಚನಗಳು 30, 31.** ಅವರಿಗೆ **ಕಣ್ಣು ಬಂದವು** ಎಂದು ಹೇಳಿರುವದು ಅವರಿಗೆ ಪುನಃ ದೃಷ್ಟಿಬಂತು ಎಂದು ಸರಳವಾದ ಅರ್ಥವಾಗಿದೆ. ಅವರು ಸ್ವಸ್ಥವಾದ ನಂತರ, **ಯೇಸು ಅವರಿಗೆ ಖಂಡಿತವಾಗಿ ಅಪ್ಪಣೆ ಮಾಡಿ: ಇದು ಯಾರಿಗೂ ತಿಳಿಯಬಾರದು!** ಅದ್ಭುತವು ಮನೆಯ ಒಳಗಡೆ ಆಗಿರುವದು (9:28), ಅದು ಗುಪ್ತವಾಗಿರಲು ಹೆಚ್ಚಿನ ಅವಕಾಶ ಒದಗಿಸಿದೆ. ಪುನಃ ಯೇಸು ಖಂಡಿತವಾಗಿ ಅದ್ಭುತದ ಕುರಿತಾಗಿ ಯಾರಿಗೂ ಹೇಳಬಾರದು ಎಂದು ಹೇಳಿ ದ್ದಾಗ್ಯೂ ಗುಣ ಹೊಂದಿದವರು **ಹೊರಟುಹೋಗಿ ಆ ದೇಶದೊಳಗೆಲ್ಲಾ ಆತನ ಸುದ್ದಿಯನ್ನು ಹಬ್ಬಿಸಿದರು** (ನೋಡಿರಿ 8:4; 9:26ರ ಮೇಲಿನ ವ್ಯಾಖ್ಯಾನ).

ಅವರಿಬ್ಬರು ಕುರುಡರು ಅತಿ ಉತ್ಸಾಹದಿಂದ ಈ ಸುದ್ದಿ ಹೇಳಿರಬಹುದು ಅಥವಾ ಅನೇಕರು ರೋಗ ಹೊಂದಿರುವ ಜನರು ಈ ಶ್ರೇಷ್ಠ ವೈದ್ಯನ ಕುರಿತು ತಿಳಿದುಕೊಳ್ಳಲಿ ಎಂದು ಹೇಳಿರಬಹುದು. ಅವರ ಕಾರಣಗಳು ಏನೇ ಆಗಿರಲಿ, ಅವರು ಸುದ್ದಿ ಹಬ್ಬಿಸಿ ಯೇಸುವಿನ ಅಪ್ಪಣೆಗೆ ಅವಿಧೇಯರಾದರು. ಆತನು ಅವರಿಗೆ ಆಜ್ಞಾಪಿಸಿದಂತೆ ಮಾಡಲು ಸೋತು ಹೋಗು ವದರ ಮುಖಾಂತರ ಅವರು ಯೇಸುವಿಗೆ ಹಿಂತಿರುಗಿಸಿದರು.

## ದೆವ್ವ ಹಿಡಿದ ಮೂಕನನ್ನು ಗುಣಪಡಿಸಿದ್ದು (9:32-34)

**[32]ಅವರು ಹೊರಟುಹೋಗುತ್ತಿರುವಾಗ ದೆವ್ವಹಿಡಿದ ಒಬ್ಬ ಮೂಕನನ್ನು ಆತನ ಬಳಿಗೆ ಕರತಂದರು. [33]ಆತನು ದೆವ್ವಬಿಡಿಸಿದ ಮೇಲೆ ಆ ಮೂಕನು ಮಾತಾಡುವವನಾದನು. ಅದಕ್ಕೆ ಆ ಜನರು - ಇಸ್ರಾಯೇಲ್ ಜನರಲ್ಲಿ ಇಂಥ ಕಾರ್ಯವನ್ನು ಇದುವರೆಗೆ ಯಾರೂ ನೋಡಲಿಲ್ಲವೆಂದು ಬೆರಗಾದರು. [34]ಆದರೆ ಫರಿಸಾಯರು - ಇವನು ದೆವ್ವಗಳ ಒಡೆಯನ ಸಹಾಯದಿಂದಲೇ ದೆವ್ವಗಳನ್ನು ಬಿಡಿಸುತ್ತಾನೆ ಅಂದರು.**

**ವಚನ 32.** ಈ ದೆವ್ವ ಹಿಡಿದವನನ್ನು ಈ ಮೊದಲು ಇಬ್ಬರು ಕುರುಡರು ಗುಣ ಹೊಂದಿದವರು ಯೇಸುವಿನಲ್ಲಿಗೆ ತೆಗೆದುಕೊಂಡು ಬಂದರೋ? ಇದು ಆ ಕುರುಡರು ಮಾಡಿದ

ಕಾರ್ಯವೆಂದು ಹೇಳಲು ವಾಕ್ಯಭಾಗದಲ್ಲಿ ಯಾವುದೇ ಆಧಾರವಿಲ್ಲ, ಅದಕ್ಕಾಗಿ ಯೇಸು **ಅವರಿಗೆ ಅಷ್ಟು ಕಠಿಣವಾದ ಅಜ್ಞೆಕೊಟ್ಟಿರುವ ಅವಿಧೇಯರಾದ ಅವರು ಅಷ್ಟರಲ್ಲಿಯೇಹಿಂತಿರುಗಿ** ಬಂದರೆಂಬುವದು ಅನುಮಾನವಾಗಿದೆ. **ಆತನು** ಎಂಬ ಸರ್ವನಾಮದ ಅನಿವಾರ್ಯತೆ ಯಿಂದ **ಅವರು ಹೊರಟುಹೋಗುತ್ತಿರುವಾಗ** ಎನ್ನುವದು ಯೇಸುವಿನ ಕುರಿತಾಗಿ ಮತ್ತು ಶಿಷ್ಯರ ಕುರಿತಾಗಿ ಮಾತಾಡುತ್ತಾ ಹೋಗುತ್ತಿದ್ದರೆಂದು ಸ್ಪಷ್ಟವಾಗುತ್ತದೆ. **ದೆವ್ವಹಿಡಿದವನನ್ನು** ಯೇಸುವಿನ **ಬಳಿಗೆ ಕರತಂದರು** ಎಂದು ಹೇಳಿ ಮುಕ್ತಾಯ ಮಾಡುವದೇ ಒಳ್ಳೆಯದು.

ಇಲ್ಲಿ **ಮೂಕನು** (*kōphos*) ಎಂದು ಉಪಯೋಗಿಸಿದ ಶಬ್ದಕ್ಕೆ ಕಿವುಡನು (11:5) ಮತ್ತು ಮಾತನಾಡುವ ಸಾಮರ್ಥ್ಯ (12:22) ಇರಲಿಲ್ಲವೆಂಬುದು ಸೇರಿಸಲಾಗಿದೆ. ಈ ಎರಡು ಒಟ್ಟಿಗೆ ಇರುವಾಗ, ಆ ವ್ಯಕ್ತಿ ಕೇಳಿಸಿಕೊಳ್ಳಲು ಸಾಧ್ಯವಿಲ್ಲದೆ ಹೋಗುವದರಿಂದ ಅವನು ಹೇಗೆ ಮಾತಾಡಬೇಕೆಂದು ಕಲಿಯುವದಕ್ಕೆ ಅಡತಡೆಯಾಗಿದೆ. ಈ ಸನ್ನಿವೇಶ ದಲ್ಲಿ, ಅವನು ಮಾತನಾಡಲು ಆಗುವದಿಲ್ಲ ಎಂದು ನಮಗೆ ತಿಳಿದಿದೆ ಅದರಿಂದ ಅವನು ಅದ್ಭುತ ಹೊಂದಿದ ಮೇಲೆ ಮೂಕನು ಮಾತಾಡಿದನು (9:33) ಎಂದು ಹೇಳಲಾಗಿದೆ. ಅವನು ಮೌನವಾಗಿರಲು ಕಾರಣ ಅವನಿಗೆ ದೆವ್ವ ಹಿಡಿದಿತ್ತು. ದೆವ್ವ ಅನೇಕ ದೈಹಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ, ಅದು ಮೂಕತನ, ಕಿವುಡತನ, ಕುರುಡತನ, ಸ್ವಂತ ಅಂಗ ಹೀನತೆ ಮಾಡಿಕೊಳ್ಳುವದು, ದೇಹ ಬಗ್ಗದಂತೆ ಇರುವದು, ಹಲ್ಲು ಕಡಿಯುವದು, ಮತ್ತು ಬಾಯಿಂದ ನೊರೆ ಬರುವದು (12:22; ಮಾರ್ಕ 1:26; 5:5; 9:18, 25).

**ವಚನಗಳು 33, 34.** ಯೇಸು **ದೆವ್ವಬಿಡಿಸಿದ ಮೇಲೆ ಮೂಕನು ಮಾತಾಡುವವನಾದನು.** ಜನರ ಪ್ರತಿಕ್ರಿಯೆ ಏನಾಗಿತ್ತು? ಮೊದಲನೆಯದಾಗಿ, **ಆ ಜನರು ಬೆರಗಾದರು. ಇಸ್ರಾಯೇಲ್ ಜನರಲ್ಲಿ ಇಂಥ ಕಾರ್ಯವನ್ನು ಇದುವರೆಗೆ ಯಾರೂ ನೋಡಲಿಲ್ಲವೆಂದು** ಅವರು ಹೇಳಿದರು. ಹಳೆ ಒಡಂಬಡಿಕೆಯು ಅದ್ಭುತಗಳಿಂದ ತುಂಬಿರುವದು, ಯೇಸುವಿನಿಂದ ಮಾಡಲ್ಪಟ್ಟಿರುವ ಅದ್ಭುತಗಳ ಸಂಖ್ಯೆ ಮತ್ತು ವೈವಿದ್ಯತೆಗೆ ಇಸ್ರಾಯೇಲ್ ಇತಿಹಾಸದಲ್ಲಿ ಸರಿಸಾಟಿಯಾಗಲಾರವು. "ಬೆರಗಾದರು" (*thaumazō*) ಎಂಬ ಗ್ರೀಕ್ ಶಬ್ದವನ್ನು "ಆಶ್ಚರ್ಯಪಟ್ಟರು" ಎಂದು ಅನುವಾ ದಿಸಲಾಗಿದೆ, ಅದನ್ನು ವಿಸ್ಮಯ ಎನ್ನುವ ಅಭಿಪ್ರಾಯವು ಆಗಬಹುದು ಅಥವಾ ಭಯ ಭೀತಿಯಿಂದ ಇದ್ದರು ಎಂದು ಸಹ ಅರ್ಥೈಸಬಹುದು. ಯೇಸುವಿನ ಅದ್ಭುತಗಳ ಸಂಖ್ಯೆ ಮತ್ತು ವೈವಿದ್ಯತೆಗಳು ಹೆಚ್ಚುತ್ತಾ ಬರುವಾಗ, ಜನರು ಹೆಚ್ಚಾಗಿ ಬೆರಗಾದರು.

ಎರಡನೆಯದಾಗಿ, **ಫರಿಸಾಯರ** ಪ್ರತಿಕ್ರಿಯೆ ನಾಟಕೀಯವಾಗಿ ಯೆಹೂದ್ಯ ಸಾಮಾನ್ಯ ಜನರಿಗಿಂತ ಭಿನ್ನವಾಗಿರುತ್ತಿದ್ದವು. ಅವರು ಯೇಸು **ದೆವ್ವಗಳ ಒಡೆಯನಾದ** "ಬೆಲ್ಜೆಬೂಲನ" ಸಹಾಯದಿಂದ **ದೆವ್ವಗಳನ್ನು ಬಿಡಿಸುತ್ತಾನೆ** ಎಂದು ಹೇಳಿದರು (ನೋಡಿರಿ 12:24; ಮಾರ್ಕ 3:22). ಫರಿಸಾಯರು ಯೇಸುವನ್ನು ಕುರಿತು ಆತನು ದೆವ್ವಗಳನ್ನು ಬಿಡಿಸುವ ಸಾಮರ್ಥ್ಯ ಅದು ದೇವರಿಂದಾಗಲಿ ಅಥವಾ ಪರಿಶುದ್ಧಾತ್ಮನಿಂದಾಗಲಿ ಬಂದದಲ್ಲ, ಆದರೆ ದೆವ್ವದಿಂದಲೆ ಬಂದಿದೆ ಎಂದು ಹೇಳುತ್ತಿದ್ದರು. ಅವರ ಆರೋಪಕ್ಕೆ ಯೇಸು ಮತ್ತಾಯ 12:25-30ರಲ್ಲಿ ಪ್ರತಿಕ್ರಿಯಿಸಿದ್ದಾನೆ:

> ಯಾವ ರಾಜ್ಯವಾದರೂ ತನ್ನಲ್ಲಿ ಭೇದ ಹುಟ್ಟಿದರೆ ಹಾಳಾಗುವದು; ತನ್ನಲ್ಲಿ ಭೇದ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. ಅದರಂತೆ ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಭೇದ ಹುಟ್ಟಿಸಿಕೊಂಡ ಹಾಗಾಯಿತು. ಹಾಗಾದರೆ ಅವನ ರಾಜ್ಯವು ಹೇಗೆ ಉಳಿದೀತು? ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ... ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ.

ಯೇಸುವಿನ ಅದ್ಭುತಗಳ ಮೂಲದ ಮೇಲೆ ದಾಳಿಮಾಡುವದು ಫರಿಸಾಯರ ಈ ಆರೋಪಣೆಯ ಸ್ಪಷ್ಟವಾದ ಉದ್ದೇಶವಾಗಿದೆ. ಅವರು ಅದ್ಭುತಗಳ ಮೇಲೆ ನೇರವಾಗಿ ದಾಳಿಮಾಡಿಲ್ಲ; ಯಾಕೆಂದರೆ ಅನೇಕ ಅದ್ಭುತಗಳಿಗೆ ಅವರು ದೂರವಾಗಿದ್ದರು, ಮತ್ತು ಜನರು ಅದ್ಭುತಗಳಲ್ಲಿ ಆತನಲ್ಲಿ ನಂಬಿಕೆ ಇಟ್ಟಿದ್ದರು. ಆತನಲ್ಲಿ ನಿಜವಾಗಿ ನಂಬಿಕೆ ಇಟ್ಟರೋ ಅಥವಾ ಆತನ ಅದ್ಭುತಗಳಲ್ಲಿ ಮಾತ್ರವೇ ನಂಬಿಕೆ ಇಟ್ಟಿದ್ದರೋ ಎಂಬುದು ನಮಗೆ ಆಶ್ಚರ್ಯವಾಗಿ ತೋರುತ್ತದೆ.

ಫರಿಸಾಯರು ಜನರ ಗುಂಪಿನ ಪ್ರತಿಕ್ರಿಯೆಯಿಂದ ಭಯಪಟ್ಟರು, ಅವರು ಯೇಸುವಿಗೆ ಅಪಕೀರ್ತಿ ತರಲು ಪ್ರಯತ್ನಿಸಿದರು - ಆತನ ಅದ್ಭುತ ಕಾರ್ಯಗಳನ್ನು ನಿರಾಕರಿಸುವದರಿಂದಲ್ಲ, ಆದರೆ "ದೆವ್ವಗಳನ್ನು ಆಳುವವನ" ದುಷ್ಟ ಬಲದಿಂದ ಇದನ್ನೆಲ್ಲಾ ಮಾಡುವನು ಎಂದು ಆರೋಪಿಸಿದರು. ಈ ಸಮಯದಲ್ಲಿ, ಯೇಸು ಸಹಜವಾಗಿ ಫರಿಸಾಯರು ಮಾಡಿದ ಆರೋಪವನ್ನು ಅಲಕ್ಷಿಸಿದನು ಮತ್ತು ಆತನು ತನ್ನ ಬೋಧನೆಯ ಸೇವೆ ಮುಂದುವರಿಸಿದನು. ಈ ಸಮಯದಲ್ಲಿ - ಅವರ ಈ ಆರೋಪ ಆತನಿಗೆ ವೈಯಕ್ತಿಕವಾಗಿ ಅಥವಾ ಆತನ ಸೇವೆಗೆ ಹೆದರಿಸುವ ಒಂದು ಕಾರ್ಯ ಅವರದಾಗಿತ್ತು ಎಂದು ಪರಿಗಣಿಸಲಾಗಿದೆ.

## ಯೇಸುವಿನ ಕಾರ್ಯದ ಸಾರಂಶ (9:35-38)

**35ಯೇಸು ಎಲ್ಲಾ ಊರುಗಳನ್ನೂ ಹಳ್ಳಿಪಳ್ಳಿಗಳನ್ನೂ ಸುತ್ತಿಕೊಂಡು ಅವರ ಸಭಾ ಮಂದಿರಗಳಲ್ಲಿ ಉಪದೇಶ ಮಾಡುತ್ತಾ ಪರಲೋಕರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಎಲ್ಲಾ ತರಹದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು. 36ಆದರೆ ಜನರ ಗುಂಪುಗಳನ್ನು ನೋಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲ ಎಂದು ಅವರ ಮೇಲೆ ಕನಿಕರಪಟ್ಟನು. 37ಆಗ ತನ್ನ ಶಿಷ್ಯರಿಗೆ 38ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು.**

9:35-38ರ ಕುರಿತು R. T. France ರವರು ಹೀಗೆ ಬರೆದಿದ್ದಾರೆ,

> ಈ ವಚನಗಳು ದ್ವಂದ ಪಾತ್ರವನ್ನು ವಹಿಸುತ್ತವೆ, 5-9ರಲ್ಲಿನ ಯೇಸುವಿನ ಸೇವೆ ಕುರಿತ ಸಾರಂಶವನ್ನು ಹೇಳುತ್ತವೆ ಮತ್ತು 10ನೇ ಅಧ್ಯಾಯವು ಶಿಷ್ಯರ (ಪರಿಮಿತಿಯುಳ್ಳ) ಸೇವೆಯನ್ನು ಪರಿಚಯ ಮಾಡುತ್ತವೆ. ಇದರಲ್ಲಿರುವ ವಾಕ್ಯಗಳು ಎಚ್ಚರದಿಂದ ಹಿಂದಕ್ಕೆ ಮತ್ತು ಮುಂದೆ ನೋಡುವಂತೆ ರಚಿಸಲಾಗಿದೆ, ಮತ್ತು ಈ ಪುಸ್ತಕದ ಎರಡು ವಿಭಾಗಗಳ ಮಧ್ಯ ಬಿಡುವಿಲ್ಲದೆ ನಿರಂತರತೆಯನ್ನು ಒತ್ತಿ ಹೇಳಲಾಗಿದೆ.[17]

**ವಚನ 35.** 4:23ರಿಂದ ಈ ವಚನವು ಅಕ್ಷರಾಶಃವಾಗಿ ಪುನರುಚ್ಚರಿಸಿದೆ, 5ನೇ ಅಧ್ಯಾಯದಿಂದ 9ನೇ ಅಧ್ಯಾಯಗಳು ಯೇಸುವಿನ ಬೋಧನೆ ಒಳಗೊಂಡು (ಅಧ್ಯಾಯ 5-7) ಮತ್ತು ಆತನ ಕಾರ್ಯಗಳು (8; 9 ಅಧ್ಯಾಯಗಳು) ಒಳಗೊಂಡು ಎರಡನ್ನು ಸಂಯೋಜಿಸುವ ಕಾರ್ಯವನ್ನು ಈ ಅಧ್ಯಾಯಗಳು ಮಾಡಿವೆ. ಏನೇ ಆದರೂ, **ಎಲ್ಲಾ ಗಲಿಲಾಯದವರು** ಎಂದು ಸೂಚಿಸುವಾಗ ಅಲ್ಲಿ **ಎಲ್ಲಾ ಊರುಗಳು ಮತ್ತು ಹಳ್ಳಿಗಳು ಎಂದು ತೆಗೆದುಕೊಳ್ಳಲಾಗಿದೆ.** ಕ್ರಿಸ್ತನ ಸಮಯದಲ್ಲಿ ಆ ಕ್ಷೇತ್ರದಲ್ಲಿ 240 ಪಟ್ಟಣಗಳು ಮತ್ತು ಹಳ್ಳಿಗಳು ಇದ್ದವು ಎಂದು ಅಂದಾಜನ್ನು Josephus ಮಾಡಿದ್ದಾನೆ.[18] ನಾವು Josephus ಸಾಕ್ಷಿಯನ್ನು ಸ್ವೀಕರಿಸುವದಾದರೆ, ಮತ್ತು ಯೇಸು ಪ್ರತಿ ದಿನ ಎರಡು ಪಟ್ಟಣಗಳನ್ನು ಅಥವಾ ಹಳ್ಳಿಗಳನ್ನು ಬೇಟಿ ನೀಡುವದಾದರೆ, ಆತನಿಗೆ ಅವೆಲ್ಲವುಗಳನ್ನು ಸಂದರ್ಶಿಸಲು ಸುಮಾರು ನಾಲ್ಕು ತಿಂಗಳು ಬೇಕಾಗುತ್ತದೆ. ಏನೇ ಆದರೂ, ನಾವು ಅದರ ಭಾಷೆಯನ್ನು ಸ್ಪಷ್ಟವಾಗಿ ಅಕ್ಷರಾಶಃವಾಗಿ ಒತ್ತಿ ಹೇಳಬಾರದು. ಯೇಸು ಇನ್ನು ಅನೇಕ ಮಹತ್ಕಾರ್ಯಗಳನ್ನು ತನ್ನ ಸೇವೆಯ ಸಮಯದಲ್ಲಿ ಗಲಿಲಾಯದಲ್ಲಿ

ಮಾಡಿದ್ದಾನೆ ಮತ್ತು ಮತ್ತಾಯನು ಯೇಸುವಿನ ಸೇವೆಯಿಂದ ಕೆಲವೊಂದು ಆ ಭಾಗಗಳನ್ನು ಓದುಗಲಿಗೆ ಮಾದಲಿಯಾಗಿ ಆಲಿಸಿಕೊಂಡಿದ್ದಾನೆ ಎಂದು ಸಾರಂಶದ ಹೇಳಿಕೆ ಹೇಳುತ್ತದೆ (ನೋಡಿರಿ ಯೋಹಾನ 20:30, 31; 21:25). ಯೇಸು ಪಟ್ಟಣಗಳನ್ನು ಮತ್ತು ಹಳ್ಳಿಗಳನ್ನು ಹಾದು ಹೋಗುತ್ತಿರುವಾಗ, **ಆತನು ಅವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ ... ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರುತ್ತಾ, ಎಲ್ಲಾ ತರದ ರೋಗಗಳನ್ನು ಎಲ್ಲಾ ತರದ ಬೇನೆಗಳನ್ನು ವಾಸಿಮಾಡುತ್ತಾ ಇದ್ದನು** (4:23ರ ಮೇಲಿನ ವ್ಯಾಖ್ಯಾನ ನೋಡಿರಿ).

**ವಚನ 36.** ಜನರ ಒಳತಿಗಾಗಿ ಯೇಸು ಬಹಳವಾಗಿ ವ್ಯಾಕುಲತೆ ಹೊಂದಿದ್ದನು. ಆತನು ಜನರ ದೈಹಿಕ ವಿಷಯದ ಕುರಿತಾಗಿ ಚಿಂತಿಸುತ್ತಿದ್ದನು ಎಂಬುದಾಗಿ ಇನ್ನು ಬೇರೆ ಸ್ಥಳಗಳಲ್ಲಿ ಹೇಳಲ್ಪಟ್ಟಿದೆ (14:13, 14; 15:30-32; 20:34), ಆದರೆ ಇಲ್ಲಿ ಅವರ ಆತ್ಮೀಕ ಬೆಳವಣಿಗೆಯ ಬಗ್ಗೆ ಚಿಂತಿಸುತ್ತಿದ್ದನು. **ಕನಿಕರಪಟ್ಟನು** ಎಂಬ ಕ್ರಿಯಾ ಶಬ್ದದ ಅನುವಾದವು ಆಳವಾದ ಉದ್ರೇಕ ವನ್ನು ವರ್ಣಿಸಲು ಉಪಯೋಗಿಸಲಾಗಿದೆ; ಸಂಬಂಧಪಟ್ಟಿರುವ ನಾಮಪದ (*splanchna*)ವು ಅದು ಹೊಟ್ಟೆಯ ಒಳಭಾಗ ಅಥವಾ ಕರಳನ್ನು ಸೂಚಿಸುತ್ತದೆ. **ಬಳಲಿ** (*skullō*) ಎಂಬ ಅರ್ಥಕೊಡುವ ಗ್ರೀಕ್ ಕ್ರಿಯಾಪದ ಬಳಲಿ ಅಥವಾ ಕಠಿಣವಾಗಿ ಸಂಕಟಕ್ಕಿಡಾದ ಆಲೋಚನೆಯನ್ನು ಕೊಡುತ್ತದೆ. ಜನರು ದಿಕ್ಕುತಪ್ಪಿತೇಲುವವರಂತೆ ನಡೆಕೊಳ್ಳುತ್ತಿದ್ದರು, ಯಾವುದೇ ಗುರಿಯಿಲ್ಲದವರಂತೆ ಅವರು ನಿರಂತರವಾಗಿ ಹೋಗುತ್ತಿದ್ದರು. ಅವರು **ಕನಿಕರಪಟ್ಟನು** (*rhiptō*). ಈ ಕ್ರಿಯಾಪದ ಹೊಸ ಒಡಂಬಡಿಕೆಯಲ್ಲಿ "ಬಿಸಾಡು" ಎನ್ನುವ ಅರ್ಥ ಆಗಾಗ ಉಪಯೋಗಿಸಲಾಗಿದೆ, ಆದರೆ "ಕೆಳಗಡೆ ಹಾಕು" ಅಥವಾ "ಕೆಳಗಡೆ ಹಾಕಲ್ಪಟ್ಟು" ಎನ್ನುವ ಕಲ್ಪನೆಯು ಸಹ ಇದೆ. ಬಹುಶಃ "ಈ ಪದವನ್ನು ಅಲಂಕಾರಿಕವಾಗಿ 'ಗೊಂದಲ' ಅಥವಾ 'ಆಯಾಸಗೊಳ್ಳುವಿಕೆ' ಇಂಥಹ ಅರ್ಥಬರುವದಕ್ಕಾಗಿ ಉಪಯೋಗಿಸಲಾಗಿದೆ"[19] ಎಂದು Hagner ರವರು ಸೂಚಿಸಿದ್ದಾರೆ.

ಆತ್ಮೀಕತೆ ಅರ್ಥಮಾಡಿಕೊಳ್ಳದಿರುವ ಮತ್ತು ಮಾರ್ಗದರ್ಶನವಿಲ್ಲದ ಜನರ ಸಮೂಹವನ್ನು ಯೇಸು ನೋಡಿದನು. **ಕುರುಬನಿಲ್ಲದ ಕುರಿಗಳ** ಹಾಗೆ ಎಂದು ವಿವರಿಸುತ್ತಿದ್ದಾನೆ. ಇಂಥಹ ವಿವರಣೆಯುಳ್ಳ ಮಾತುಗಳು ಹಳೆಒಡಂಬಡಿಕೆಯಲ್ಲಿ ಕೆಲವು ಕಡೆಯಲ್ಲಿ ಕಾಣಿಸುತ್ತವೆ (ಅರಣ್ಯಕಾಂಡ 27:17; 1 ಅರಸುಗಳು 22:17; 2 ಪೂರ್ವಕಾಲವೃತ್ತಾಂತ 18:16; ಯೆಶಾಯ 13:14; ನೋಡಿರಿ ಯೆಹೆಜ್ಕೇಲನು 34:5; ಜಕರಿಯಾ 10:2; 11:5) ಮತ್ತು ಇದನ್ನು ಹೊಸ ಒಡಂಬಡಿಕೆಯಲ್ಲಿಯೂ ಮುಂದುವರಿಸಲಾಗಿದೆ (ಮತ್ತಾಯ 9:36; ಮಾರ್ಕ 6:34). ಕುರುಬರನ್ನು ಮತ್ತು ಕುರಿಯನ್ನು ಅನೇಕ ಸಾರಿ ಹಳೆ ಒಡಂಬಡಿಕೆಯಲ್ಲಿ ಸಾದೃಶ್ಯವಾಗಿ ಉಪಯೋಗಿಸಲಾಗಿದೆ (ಕೀರ್ತನೆ 23:1-6; 77:20; 78:52; 95:7; 100:3; ಯೆಶಾಯ 40:11). ತನಗೆ ತಾನು ಅಂಥಹಾ ಹೋಲಿಕೆಯನ್ನು ಯೇಸು ಉಪಯೋಗಿಸಿಕೊಂಡಿದ್ದಾನೆ (ಯೋಹಾನ 10:11-16). ಕೋಮಲತೆಯುಳ್ಳ ಮತ್ತು ನಿಕಟವಾದ ಸಂಬಂಧವು ಕುರಿಬನಿಗೂ ಮತ್ತು ಕುರಿಗೂ ಇರುತ್ತದೆ; ಅವನು ಕುರಿಗಳಿಗೆ ಹಸಿರಾಗಿರುವ ಹುಲ್ಲಿನೆಡೆಗೆ ನಡೆಸುವನು, ದರೋಡೆ ಕೋರರಿಂದ ಕಾಪಾಡುತ್ತಾನೆ, ಮತ್ತು ದಾರಿತಪ್ಪಿಹೋಗುವಾಗ ಅವುಗಳನ್ನು ಹುಡುಕುತ್ತಾನೆ (ಲೂಕ 15:3-7). ಯೇಸು "ಒಳ್ಳೆ ಕುರುಬನು" ಆಗಿದ್ದಾನೆ (ಯೋಹಾನ 10:11; ನೋಡಿರಿ ಇಬ್ರಿಯ 13:20; 1 ಪೇತ್ರ 2:25; 5:4); ಆದರೆ ಆ ದಿನದ ಕೂಲಿಕಾರರು - ಫರಿಸಾಯರು, ಶಾಸ್ತ್ರಿಗಳು, ಮತ್ತು ಯೆಹೂದ್ಯ ಧರ್ಮಗುರುಗಳು - ಇವರು ಕುರಿಹಿಂಡನ್ನು ಬಿಟ್ಟು ಬಿಡುತ್ತಾರೆ ಅವುಗಳ ರಕ್ಷಣೆ ಅವುಗಳೇ ಮಾಡಿಕೊಳ್ಳಲು ಬಿಡುತ್ತಾರೆ.

**ವಚನಗಳು 37, 38.** ಯೇಸು ಇಲ್ಲಿ ಕುರಿಯ ಕುರಿತು ರೂಪಲಂಕಾರವನ್ನು ಸುಗ್ಗಿಗೆ ಬದಲಾಯಿಸಿದ್ದಾನೆ. **ಆತನು ತನ್ನ ಶಿಷ್ಯರಿಗೆ, ಬೆಳೆಯು ಬಹಳ, ಕೆಲಸದವರು ಸ್ವಲ್ಪ** ಎಂದು ಹೇಳಿದನು. ಆತನು ಸಮಾರ್ಯಕ್ಕೆ ಬೇಟಿಕೊಟ್ಟಾಗ, "ನೀವು ಹೊಲಗಳನ್ನು ನೋಡಿರಿ; ಅವು ಬೆಳಗಾಗಿ ಕೊಯ್ಲಿಗೆ ಬಂದಿವೆ" ಎಂದು ಆತನು ತನ್ನ ಶಿಷ್ಯರಿಗೆ ಹೇಳಿದನು

(ಯೋಹಾನ 4:35). ಆತನು ಕೇವಲ "ಕಳೆದು ಹೊದದಕ್ಕಾಗಿ ಪ್ರಾರ್ಥಿಸಿರಿ" ಎಂದು ಹೇಳಲಿಲ್ಲ, ಅದು ಮಾಡುವದಕ್ಕೆ ಒಳ್ಳೆಯದಾಗಿದ್ದರೂ ಸಹ. ಅದರ ಬದಲಾಗಿ, **ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ** ಎಂದು ಹೇಳಿದನು. ಯೇಸುವಿನ ಕಾಲದಲ್ಲಿ, "ಸುಗ್ಗಿಯ ಯಜಮಾನ." ಜನರನ್ನು ಬಾಡಿಗೆಗೆ ತೆಗೆದುಕೊಂಡಿರುವ ವ್ಯಕ್ತಿಯಾಗಿದ್ದನು ಮತ್ತು ಅವರನ್ನು ಹೊಲಕ್ಕೆ ಕಳುಹಿಸುತ್ತಿದ್ದನು. ಆತನು ಅವರಿಗೆ ಕೂಲಿಕೊಡುವ ಜವಾಬ್ದಾರಿ ಆತನದೆ ಆಗಿತ್ತು. ಸುಗ್ಗಿಗಾಗಿ ಈ ವ್ಯಕ್ತಿಯು ಅದಕ್ಕೆ ಮೇಲ್ವಿಚಾರಕನಾಗಿರಬಹುದು ಅಥವಾ ನಿಜವಾದ ಹೊಲದ ಮಾಲೀಕನು ಅದರ ಮೇಲ್ವಿಚಾರಣೆ ನೋಡಿಕೊಳ್ಳುವನು. ಯೇಸುವಿನ ಸಾಮ್ಯದಲ್ಲಿ, ಹೊಲದ ಯಜಮಾನನು ಕೂಲಿ ಆಳುಗಳನ್ನು ಬಾಡಿಗೆಗೆ ತೆಗೆದುಕೊಂಡು, ಅವರನ್ನು ತನ್ನ ದ್ರಾಕ್ಷಾತೋಟಕ್ಕೆ ಕೆಲಸ ಮಾಡಲು ಕಳುಹಿಸುತ್ತಾನೆ, ಮತ್ತು ಅವರಿಗೆ ದಿನದ ಅಂತ್ಯದಲ್ಲಿ ಕೂಲಿಯನ್ನು ಕೊಡುವನು (20:1-16). ಈ ಒಂದು ಸನ್ನಿವೇಶದಲ್ಲಿ, ದೇವರು (ಅಥವಾ ಯೇಸು) ವನ್ನು ಈ "ಸುಗ್ಗಿಗೆ ಯಜಮಾನ" ಮತ್ತು ಆತನ ಹೊಲ ಲೋಕವಾಗಿದೆ. ಆತನ ಕೆಲಸಗಾರರು ಆತನ ಶುಭವಾರ್ತೆಯನ್ನು ಸಾರಿ, ಆತ್ಮಗಳನ್ನು ದೇವರ ರಾಜ್ಯದಲ್ಲಿ ಸೇರಿಸುವವರು. ಸುಗ್ಗಿ ಎಂಬ ಅಲಂಕಾರ ಇಲ್ಲಿ ಉಪಯೋಗಿಸಿರುವದು ಅಂತಿಮ ನ್ಯಾಯತೀರ್ಪಾಗಿರುತ್ತದೆ (3:12; 13:24-30, 36-43; ಪ್ರಕಟಣೆ 14:14-20). ಕೆಲಸಗಾರರು ಸ್ವಲ್ಪ ಜನರು ಎಂದು ಸೂಚಿಸಲ್ಪಟ್ಟಾಗ, ಯೇಸು ಸುಗ್ಗಿಯ ಹೊಲಕ್ಕೆ ಕಳುಹಿಸಲು ಕೆಲವು ನಿರ್ಧಿಷ್ಟವಾದ ಶಿಷ್ಯರನ್ನು ಆರಿಸಿಕೊಂಡನು (10:1).

## ಪಾಠಗಳು

### ಅಡಚಣೆಗಳನ್ನು ಜಯಿಸುವದು (9:20-22)

9:20-22ರಲ್ಲಿ, ಯೇಸುವಿನ ಉಡುಪನ್ನು ಮುಟ್ಟಿದ ಹೆಂಗಸು ಆತನ ಹತ್ತಿರ ಬಂದು ಅನೇಕ ಅಡಚಣೆಗಳನ್ನು ಜಯಿಸಿದಳು. ಮೊದಲನೆಯದಾಗಿ, ಜನರನ್ನು ಜಯಿಸಿದಳು. "ಜನರ ಗುಂಪು ಆತನ ಮೈ ಮೇಲೆ ಒತ್ತೊತ್ತಿ ಬೀಳುತ್ತಿದ್ದರು" (ಲೂಕ 8:45); ಅಲ್ಲಿ ಈಕೆಯಂತೆ ಅನೇಕರು ಯೇಸುವಿನೆಡೆಗೆ ಹೋಗಲು ಏನನ್ನು ಲಕ್ಷಮಾಡದೆ ತೂರಿಕೊಂಡು ಹೋಗುತ್ತಿದ್ದರು ಎಂಬುದಾಗಿ ಸಂಶಯವಿಲ್ಲದೆ ಹೇಳಬಹುದು. ಎರಡನೆಯದಾಗಿ, ಆಕೆಯು ಜನರಿಂದ ಅಪಮಾನ ಮತ್ತು ಹಾಸ್ಯಸ್ಪದವನ್ನು ಎದುರಿಸಿದಳು; ಆದರೆ ಆಕೆಯು ಭಯವನ್ನು ಜಯಿಸಿದಳು ಮತ್ತು ಜನರನ್ನು ಒತ್ತಿಕೊಂಡು ಹೋಗಿ, ಆತನ ಉಡುಪನ್ನು ಮುಟ್ಟುವಷ್ಟರಟ್ಟಿಗೆ ಯೇಸುವಿನ ಹತ್ತಿರ ಹೋದಳು. ಮೂರನೆಯದಾಗಿ, ಆಕೆಯು ಗುಣವಾಗದ ಸಾಧ್ಯತೆಯನ್ನು ಎದುರಿಸಬೇಕಾಯಿತು. ಆಕೆಯ ನಂಬಿಕೆಯೇ ಆಕೆಗೆ ಆ ಅಪಾಯವನ್ನು ಎದುರಿಸಲು ಧೈರ್ಯಕೊಟ್ಟಿತು (9:22).

### ದೇವರ ಬಲದಲ್ಲಿ ನಂಬಿಕೆ ಇಡುವದು? (9:27-31)

ಇಬ್ಬರು ಕುರುಡರು ಯೇಸುವಿಗಾಗಿ ಹುಡುಕಿದರು ಯಾಕೆಂದರೆ ಅವರು ನೋಡ ಬೇಕಾಗಿತ್ತು. ಯೇಸು ಅವರಿಗೆ ಅವರ ನಂಬಿಕೆಯನ್ನು ಪರಿಕ್ಷಿಸುವದಕ್ಕಾಗಿ, "ನಾನು ಇದನ್ನು ಮಾಡಬಲ್ಲೆನೆಂದು ನಂಬುತ್ತಿರೋ?" ಎಂದು ಕೇಳಿದನು (9:28). ಅವರು ಆತನಲ್ಲಿ ತಮ್ಮ ನಂಬಿಕೆ ದೃಢಪಡಿಸಿ ಕೊಂಡರು, ಮತ್ತು ಆತನು ಅವರಿಗೆ ದೃಷ್ಠಿಕೊಟ್ಟನು.

ಇಂದು ನಾವು ನಿಜವಾಗಲು ದೇವರ ಬಲದಲ್ಲಿ ನಂಬಿಕೆ ಇಡುತ್ತೇವೋ? ಪ್ರತಿ ವರ್ಷ ಅಮೇರಿಕ ದೇಶದವರು ಯಶಸ್ವಿಯಾಗಲು ಪ್ರೋತ್ಸಾಹ ಮಾಡುವ ತರಬೇತಿಗಾಗಿ ಬಹಳಷ್ಟು ಹಣವನ್ನು ಖರ್ಚುಮಾಡುತ್ತಾರೆ. ಹೆಚ್ಚಿನ ಈ ತರಬೇತಿಗಳಲ್ಲಿ ತಮ್ಮನ್ನು ತಾವೇ ನಂಬಲು

ಅವರಿಗೆ ಕಲಿಸಲಾಗುತ್ತದೆ. ತಮ್ಮನ್ನು ತಾವು ನಂಬುವದರಲ್ಲಿ ಯಾವುದೇ ತಪ್ಪಿಲ್ಲ; ಅದು ಅವಶ್ಯ ಕೂಡ ಇದೆ. ಏನೇ ಆದರೂ, ಕೆಲವು ಸಮಸ್ಯೆಗಳು ನಾವೆ ಎದುರಿಸಲು ನಮಗೆ ದೊಡ್ಡದಾಗಿದ್ದು ಕಷ್ಟಕರವಾಗಿರುತ್ತದೆ. ದೇವರ ಬಲದಲ್ಲಿ ನಂಬಿಕೆ ಇಡಲು ಸಹಾಯ ಮಾಡುವಂತೆ ನಮಗೆ ಯಶಸ್ವಿಯಾಗುವ ಪ್ರೋತ್ಸಾಹ ತರಬೇತಿ ಅವಶ್ಯಕತೆಯಿದೆ.

ದೇವರು ನಮ್ಮ ಮುಖಾಂತರ ಕೆಲಸ ಮಾಡುತ್ತಾನೆಂದು ನಾವು ನಂಬುವಾಗ, ನಮಗೆ ಮಾಡಲು ಆಗದೆ ಇರುವಂಥದ್ದು ಸ್ವಲ್ಪ ಅಲ್ಲಿ ಇದೆ. ಕ್ರಿಸ್ತನು ತಾನು ಮಾಡಬೇಕಾಗಿರುವದನ್ನು ನನ್ನ ಮುಖಾಂತರ ಮಾಡಲು ಆತನು ಸಾಮರ್ಥ್ಯವುಳ್ಳವನು ಎಂದು ಪೌಲನು ನಂಬಿದನು (ಎಫೆಸ 3:20; ಫಿಲಿಪ್ಪಿ 4:13).

## "ನಾನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ?" (9:27-31)

ನಮ್ಮ ನಂಬಿಕೆಯ ಅಳತೆ ನಮ್ಮ ಆಲೋಚನೆ ನಿರ್ಧರಿಸುತ್ತದೆ, ಮತ್ತು ನಮ್ಮ ಆಲೋಚನೆಯ ಅಳತೆ ನಮ್ಮ ಆತ್ಮೀಕ ಬೆಳವಣಿಗೆಯನ್ನು ನಿರ್ಧರಿಸುತ್ತದೆ. ಒಬ್ಬ ವ್ಯಕ್ತಿ ಏನನ್ನು ಸಾಧಿಸಲು ಆಗುವದಿಲ್ಲವೆಂದು ನಂಬಿರುತ್ತಾನೋ ಅದಕ್ಕಿಂತಲು ಹೆಚ್ಚಾಗಿ ಆತನು ಏನನ್ನು ಸಾಧಿಸುವದಿಲ್ಲ.

ದೇವರು ಆಲೋಚಿದಂತೆ ನಾವು ಆಲೋಚಿಸುವದಿಲ್ಲ ಎಂಬುದನ್ನು ನಾವು ಜ್ಞಾಪಕ ಮಾಡಿಕೊಳ್ಳಬೇಕು (ಯೆಶಾಯ 55:8). ದೇವರ ಉದ್ದೇಶಗಳನ್ನು ಮತ್ತು ನಿರೀಕ್ಷೆಗಳನ್ನು ಯಾವಾಗ ನಾವು ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತೇವೋ ಅದು ನಾವು ಮಾಡುವ ಗಂಭೀರವಾದ ತಪ್ಪು ಆಗಿರುತ್ತದೆ. "ದೇವರು ನನ್ನಿಂದ ಇದನ್ನು ಆಪೇಕ್ಷಿಸುತ್ತಾನೆಂದು ನಾನು ಯೋಚಿಸುವುದಿಲ್ಲ" ಎನ್ನುವ ಮಾತುಗಳನ್ನು ಬಿಟ್ಟು ಬಿಡಬೇಕು. ದೇವರು ನೋಡುವ ರೀತಿ ಯಲ್ಲಿ ನಾವು ನೋಡಲು ಹೇಗೆ ಸಾಧ್ಯ? ಮೊದಲು, ನಮ್ಮ ಮನಸ್ಸು ನವೀಕರಿಸಿಕೊಳ್ಳಬೇಕು (ರೋಮಾಪುರ 12:1, 2). ಎರಡನೆಯದಾಗಿ, ದೇವರ ಮನಸ್ಸು ಆತನ ವಾಕ್ಯದಲ್ಲಿ ಪ್ರಕಟವಾಗಿದೆ, ನಾವು ಬೈಬಲನ್ನು ಅಧ್ಯಯನ ಮಾಡಬೇಕು.

ನಮ್ಮ ನಂಬಿಕೆ ಹೇಗೆ ಹೆಚ್ಚಿಸಿಕೊಳ್ಳಬೇಕು ಮತ್ತು ದೇವರು ಯೋಚಿಸಿದಂತೆಯೇ ನಾವು ಹೆಚ್ಚಾಗಿ ಯೋಚಿಸುವಂತೆ ಕಲಿಯಲು ನಮಗೆ ಮೂರು ವಾಕ್ಯಭಾಗಗಳು ಪ್ರಕಟಿಸುತ್ತವೆ.

*ಯೇಸುವಿನಲ್ಲಿ ನಂಬಿಕೆ ಇಡು* (9:27-31). ಇಬ್ಬರು ಕುರುಡರು ಯೇಸುವನ್ನು ಹಿಂಬಾಲಿಸಿದರು ಮತ್ತು ಆತನಿಗೆ ಅವರ ಮೇಲೆ ಕರುಣೆ ತೋರಲು ಕೇಳಿಕೊಂಡರು. ನೀವು ನಂಬುವದಾದರೆ ಆತನು ನಿಮಗೆ ದೃಷ್ಟಿಕೊಡುವನು ಎಂದು ಕೇಳಿದಾಗ, ಅವರು ಹೌದು ಸ್ವಾಮಿ ನಂಬುತ್ತೇವೆ ಎಂದರು (9:28). ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ - "ನೀವು ನಂಬಿದಂತೆ ನಿಮಗೆ ಆಗಲಿ" ಅಂದನು (9:29). ತಕ್ಷಣವೇ, ಅವರು ದೃಷ್ಟಿಯನ್ನು ಹೊಂದಿದರು.

ಪ್ರತಿಯೊಂದು ಸ್ವಸ್ಥತೆ ಹೊಂದಿದ ಘಟನೆಗಳಲ್ಲಿ ಗುಣವಾಗುವವರ ನಂಬಿಕೆಯ ಮೇಲೆ ಆಧಾರಗೊಂಡಿರುವದಿಲ್ಲ. ಉದಾಹರಣೆಗೆ ನಾಲ್ಕು ಜನ ಸ್ನೇಹಿತರಿಂದ ಒಬ್ಬ ಕುಂಟನನ್ನು ಯೇಸುವಿನ ಬಳಿಗೆ ತೆಗೆದುಕೊಂಡು ಬಂದದ್ದು, ಶತಾಧಿಪತಿಯ ಆಳು ಸ್ವಸ್ಥವಾಗಿದ್ದು ಮತ್ತು ಗದೇರ ಪ್ರಾಂತದಲ್ಲಿ ದೆವ್ವಹಿಡಿದವರು.

ಹೇಗಿದ್ದರೂ, ಆತನಲ್ಲಿ ನಾವು ಇಟ್ಟಿರುವ ನಂಬಿಕೆಗನುಗುಣವಾಗಿ ನಾವು ದೇವರಿಗೆ ಉಪಯೋಗವಾಗುವದು ನಿರ್ಧಾರವಾಗುತ್ತದೆ. ಆತನು ನಮ್ಮ ಮುಖಾಂತರ ಎಲ್ಲಾವನ್ನು ಆತನ ಚಿತ್ತದ ಪ್ರಕಾರ ಮಾಡಿ ಮುಗಿಸಲು ಶಕ್ತನಾಗಿದ್ದಾನೆ ಎಂದು ನಾವು ನಂಬಲೇಬೇಕು; ನಮ್ಮನ್ನು ನೋಡಿಕೊಳ್ಳಲು ದೇವರಿಗೆ ಯಾವುದೇ ದೊಡ್ಡ ಸಂಗತಿಯಲ್ಲ (19:26).

ನಿಜವಾದ ಅಥವಾ ಕಲ್ಪನೆಯಿಂದ ಕೂಡಿದ ದೌರ್ಬಲ್ಯದಿಂದ, ನಾವು ಆಗಾಗ ಹಿಂದೆ

ಬೀಳುತ್ತೇವೆ ವಯಸ್ಸು ಅನಾರೋಗ್ಯ, ವರಗಳ ಕೊರತೆಯಿಂದ ಹಿಂದೆ ಉಳಿದಿರಬಹುದು; ಆದರೆ ಒಬ್ಬ ವ್ಯಕ್ತಿ ತಾನು "ದೌರ್ಬಲ್ಯ"ನು ಎಂದು ನಾನು ಏನು ಮಾಡಲು ಸಾಧ್ಯ ಎಂದು ಆಲೋಚಿಸಲು ಪ್ರಾರಂಭಿಸಬೇಕು ಆಗ ಅವನ ದೌರ್ಬಲ್ಯ ನಿಲ್ಲುತ್ತದೆ. ಶಾರೀರಿಕ ದೌರ್ಬಲ್ಯನಾಗುವದಕ್ಕಿಂತ ಆತ್ಮೀಕ ದೌರ್ಬಲ್ಯನಾಗುವದು ಬಹಳ ಹೀನವಾದದ್ದಾಗಿದೆ.

*ಯಶಸ್ಸಿಗೆ ದೇವರ ಭರವಸೆಯಿಂದ ಪ್ರೋತ್ಸಾಹಗೊಂಡವನಾಗಿರು* (ಫಿಲಿಪ್ಪಿ 4:13). ದೇವರು ಹೇಳಿದ್ದನ್ನು ಮಾಡಿ ಮುಗಿಸಲು ಪೌಲನು ಮೂರು ಹಂತದ ಯೋಜನೆಯನ್ನು ಹೇಳುತ್ತಾನೆ: (1) "ನಾನು ಮಾಡಬಹುದು," (2) "ಎಲ್ಲಾವನ್ನು ಮಾಡು," (3) "ನನ್ನನ್ನು ಬಲಪಡಿಸುವಾತನ ಮುಖಾಂತರ," ದೇವರು ಮಾಡಬೇಕೆಂದಿರುವದು ತನ್ನ ಮುಖಾಂತರ ಮಾಡಲು ದೇವರು ಶಕ್ತನು ಎಂದು ಪೌಲನು ನಂಬಿದ್ದನು.

ದೇವರ ರಾಜ್ಯದಲ್ಲಿ ಕಾರ್ಯಗಳನ್ನು ಮಾಡಿ ಮುಗಿಸಲು ದೇವರು ಯಾವುದೇ ಮಿತಿಯನ್ನು ಹಾಕಿರುವದಿಲ್ಲ. ನಾವು ಮಾಡುತ್ತೇವೆ! "ಅವನು ತನ್ನ ಒಳಗಿನ ಯೋಚನೆಯಂತೆಯೇ ಇದ್ದಾನೆ" (ಜ್ಞಾನೋಕ್ತಿ 23:7). ದೇವರ ರಾಜ್ಯದಲ್ಲಿ ನಾವು ಉಪಯೋಗವಾಗುವದರ ಕೊರತೆ ಇದೆ ಎಂದು ನಾವು ಆಲೋಚಿಸಿದರೆ, ಅಲ್ಲಿ ಸಮಸ್ಯೆ ದೇವರೊಂದಿಗೆ ಇರುವ ಸಮಸ್ಯೆ ಅಲ್ಲ, ಆದರೆ ನಮ್ಮ ಆಲೋಚನೆಯ ಸಮಸ್ಯೆಯಾಗಿದೆ.

*ನಮ್ಮ ಮುಖಾಂತರ ಕಾರ್ಯಮಾಡುವ ದೇವರ ಬಲದ ಮೇಲೆ ಲಕ್ಷ್ಯವಹಿಸಬೇಕು* (ಎಫೆಸ 3:20). ಈ ವಾಕ್ಯಭಾಗವನ್ನು ಎಚ್ಚರದಿಂದ ಪರಿಶೋಧಿಸೋಣ. "ಈಗ ಆತನಿಗೆ" ಎಂಬುದು ಸೃಷ್ಟಿಕರ್ತನನ್ನು ಮತ್ತು ಈ ಲೋಕವನ್ನು ಅದರಲ್ಲಿರುವದೆಲ್ಲವನ್ನು ಕಾಪಾಡುವ ದೇವರನ್ನು ಸೂಚಿಸುತ್ತದೆ. "ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ" ಎಂದರೆ "ಯೋಚಿಸುವದಕ್ಕಿಂತಲೂ, ನಮ್ಮ ಅಳತೆಗಿಂತಲೂ ಮೀರಿ" ಎಂದರ್ಥ. "ನಾವು ಬೇಡುವದಕ್ಕಿಂತಲೂ ಅಥವಾ ಯೋಚಿಸುವಕ್ಕಿಂತಲೂ" ಎನ್ನುವಾಗ ದೇವರು ಕೊಡುವದಕ್ಕಿಂತಲೂ ಹೆಚ್ಚಾಗಿ ನಾವು ಕೇಳಲಾಗುವದಿಲ್ಲವೆಂಬುದನ್ನು ತಿಳಿಸುತ್ತದೆ. ಮಾಡ ಬಲ್ಲ ದೇವರ ಶಕ್ತಿಗಿಂತ ಅಧಿಕವಾಗಿ ಯೋಚಿಸಲಾರೆವು. ದೇವರ ಚಿತ್ತ ಮತ್ತು ನಮ್ಮ ನಂಬಿಕೆ ಇತಿಮಿತಿಯಾಗಿದೆ. "ನಮ್ಮಲ್ಲಿ ಕಾರ್ಯಸಾಧಿಸುವ ಶಕ್ತಿಯ ಪ್ರಕಾರ" ಎಂಬುದು ದೇವರು ತನ್ನ ಬಲದೊಂದಿಗೆ ನಮ್ಮಲ್ಲಿ ಕಾರ್ಯಮಾಡುತ್ತಾನೆ ಎಂದು ತಿಳಿಸುತ್ತದೆ. ನಾವು ಚಿಕ್ಕದಾಗಿ ಯೋಚಿಸಿ ಚಿಕ್ಕ ಯೋಜನೆ ಮಾಡಿದ್ದಿಯಾದರೆ, ನಾವು ಚಿಕ್ಕದ್ದಾಗಿಯೇ ಇರುತ್ತೇವೆ. ಅದಕ್ಕೆ ವ್ಯತಿರಿಕ್ತವಾಗಿ, ನಾವು ದೊಡ್ಡ ಕಾರ್ಯಗಳನ್ನು ಯೋಚನೆ ಮಾಡಿ ಮತ್ತು ಯೋಜನೆ ಮಾಡಿದರೆ ನಾವು ದೊಡ್ಡ ಕಾರ್ಯಗಳನ್ನು ಸಾಧಿಸಬಹುದು. ನಾವು ವೈಯಕ್ತಿಕ ಕ್ರೈಸ್ತರಾಗಿ ಬೆಳೆಯಲು ಅಥವಾ ಸಭೆಯ ಸದಸ್ಯರಾಗಿ ಬೆಳೆಯಲು ಆಡಚಣೆ ಅಥವಾ ಬೆಳೆಯಲು ಸಹಾಯ ಮಾಡುವದು ನಮ್ಮ ನಂಬಿಕೆಯೇ.

*ಮುಕ್ತಾಯ.* ದೇವರು ನಮ್ಮ ಮುಖಾಂತರ ಏನಾದರು ಮಾಡಬೇಕು ಎಂದು ಆಶಿಸುವಾಗ, ನಾವು ಅದನ್ನು ಮಾಡಲು ಸಿದ್ಧರಾಗಿ ಮತ್ತು ಅದನ್ನು ಮಾಡಲು ಮನಸ್ಸು ಮಾಡುವಾಗ ಅದನ್ನು ಮಾಡಬಹುದು. ಆತನಿಗೋಸ್ಕರ ಸೇವೆ ಮಾಡುವ ನಮ್ಮ ಸಾಮರ್ಥ್ಯವನ್ನು ನಿರ್ಧರಿಸುವದು ನಮ್ಮ ನಂಬಿಕೆಯೇ.

## ಸಭೆಯ ಸೇವೆ (9:35-38)

ಸಭೆಯ ಸೇವೆ ಎಂದರೆ ಮಹಾನಿಯೋಗವಾಗಿದೆ (28:18-20; ಮಾರ್ಕ 16:15, 16). "ಕಳೆದು ಹೋಗಿರುವಂಥದ್ದನ್ನು ಹುಡುಕುವಂಥದ್ದಾಗಿದೆ" (ಲೂಕ 19:10). ಈ ಸೇವೆಗೆ ನಾವು ಸಭೆಯಾಗಿ ಎಲ್ಲಾ ರೀತಿಯ ಸೇವೆ ಮಾಡುವಾಗ ಅದು ಉಪಸೇವೆಯಾಗುತ್ತದೆ. ನಾವು ಅದರ ವಾಸ್ತವಾಂಶವನ್ನು ಆಗಾಗ ಕಳೆದುಕೊಳ್ಳುವವರಾಗಿದ್ದೇವೆ.

ಯೇಸು ನಮಗೆ ಉದಾಹರಣೆಯಾಗಿದ್ದಾನೆ (1 ಪೇತ್ರ 2:21). "ಆತನು ಅನೇಕ

ಪಟ್ಟಣಗಳ ಮತ್ತು ಊರುಗಳ ಮುಖಾಂತರ ಹೋಗುತ್ತಿರುವಾಗ ... ಎಲ್ಲಾ ತರದ ರೋಗ ಗಳನ್ನು ಮತ್ತು ಎಲ್ಲಾ ತರದ ಬೇನೆಗಳನ್ನು ವಾಸಿಮಾಡುತ್ತಿದ್ದನು," ಆತನು ಅವರ "ಸಭಾ ಮಂದಿರಗಳಲ್ಲಿ ಬೋಧನೆ ಮಾಡುತ್ತಾ ಪರಲೋಕ ರಾಜ್ಯದ ಸುವಾರ್ತೆಯನ್ನು ಸಹ ಸಾರಿ ಹೇಳುತ್ತಾ ಇದ್ದನು" (9:35). ಬೋಧಿಸುವದು ಮತ್ತು ಉಪದೇಶ ಮಾಡುವದು ಆತನಿಗೆ ಪ್ರಾಥಮಿಕವಾಗಿತ್ತು, ಮತ್ತು ಎಲ್ಲಾ ತರದ ರೋಗಗಳನ್ನು ಮತ್ತು ಬೇನೆಗಳನ್ನು ಗುಣಪಡಿಸುವದು ಎರಡನೆಯದಾಗಿತ್ತು. ಆತನು ಸಾರಿದ ಸಂದೇಶವು ಯೋಗ್ಯತೆಯುಳ್ಳದ್ದಾಗಿಯೂ ಮತ್ತು ನ್ಯಾಯಸಮ್ಮತ್ತಾಗಿಯೂ ಸ್ಥಾಪನೆ ಮಾಡುವದೇ ಈ ಅದ್ಭುತಗಳನ್ನು ಮಾಡುವ ಮುಖ್ಯ ಉದ್ದೇಶವಾಗಿತ್ತು. ಕುದುರೆಗಿಂತ ಮುಂದೆ ಚಕ್ಕಡಿಯನ್ನು ಕಟ್ಟಿದರೆ ಉಪಯೋಗವಿಲ್ಲ ಎಂಬ ಗಾದೆಯಂತೆ ನಾವು ಮಾಡಬಾರದು. ನಾವು ದೇಹವನ್ನು ಆಹಾರದಿಂದ ತುಂಬಿಸಿದಂತೆಯೇ ಮತ್ತು ಗುಣಪಡಿಸಿದಂತೆಯೇ, ನಾವು ಆತ್ಮವನ್ನು ಅಲಕ್ಷ್ಯ ಮಾಡಲೇಬಾರದು.

## ಕರ್ತನ ಸುಗ್ಗಿ (9:37, 38)

ಇಂದು ಸಹ ಇನ್ನು ಸಮೃದ್ಧಿಯಾದ ಸುಗ್ಗಿ ಇದೆ, ಆದರೆ ಕೆಲಸಗಾರರು ಕಡಿಮೆ ಇದ್ದಾರೆ. "ಲಕ್ಷಾನುಗಟ್ಟಲೆ ಜನರು ಲಕ್ಷಾನುಗಟ್ಟಲೆ ಇನ್ನು ಕೇಳಿಸಿಕೊಳ್ಳದವರು ಇದ್ದಾರೆ." ಯೇಸು ತನ್ನ ಶಿಷ್ಯರಿಗೆ ಕೊಟ್ಟಿರುವ ಮಹಾ ಆಜ್ಞೆ ಇಂದು ಶಿಷ್ಯರಿಗೆ ಹಾಗೆಯೇ ಉಳಿದುಕೊಂಡಿದೆ. "ನಾವು ಮಣ್ಣು ಪರೀಕ್ಷೆ ಮಾಡುವವರಲ್ಲ, ಆದರೆ ನಾವು ಬೀಜ ಬಿತ್ತುವವರು" ಎಂದು Marshall Keeble ಹೇಳಿದ್ದಾರೆ. ಇದಕ್ಕೆ ಹೋಲಿಕೆಯಂತೆ, ಉತ್ಪಾದನೆಯ ಗುಣಮಟ್ಟ ನಿರ್ಧರಿಸುವದು ನಮ್ಮ ಜವಾಬ್ದಾರಿ ಅಲ್ಲ, ಆದರೆ ಎಷ್ಟು ಆಗಿದೆಯೋ ಅದನ್ನು ಒಟ್ಟುಗೂಡಿಸುವದು ನಮ್ಮ ಜವಾಬ್ದಾರಿಯಾಗಿದೆ ದೇವರ ಹೃದಯ ವೈಶಾಲ್ಯತೆಯ ಭಾಗವು ಅದರಲ್ಲಿರುತ್ತದೆ. ನ್ಯಾಯತೀರ್ಪಿನ ದಿನದಂದು, ಉತ್ಪಾದಿಸಲಾಗದ ಮತ್ತು ಹಕ್ಕು ಬಾಧ್ಯತೆ ಇರದೆ ಇರುವ ಗಿಡಗಳನ್ನು ಕಿತ್ತು ಬೆಂಕಿಯಲ್ಲಿ ಹಾಕುವರು (13:24-30, 36-43; 15:13).

ಟಿಪ್ಪಣಿಗಳು

[1]Douglas R. A. Hare, *Matthew*, Interpretation (Louisville: John Knox Press, 1993), 105. [2]Ibid. [3]Robert H. Mounce, *Matthew,* New International Biblical Commentary (Peabody, Mass.: Hendrickson Publishers, 1991), 86. [4]Donald A. Hagner, *Matthew 1—13,* Word Biblical Commentary, vol. 33A (Dallas: Word Books, 1993), 248. [5]H. Leo Boles, *A Commentary on the Gospel According to Matthew* (Nashville: Gospel Advocate Co., 1936), 211. [6]William Hendriksen, *New Testament Commentary: Exposition of the Gospel According to Matthew* (Grand Rapids, Mich.: Baker Book House, 1973), 430. [7]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 65. [8]Josephus *Wars* 3.9.5; Mishnah *Baba Metzia* 6.1. [9]Mishnah *Ketuboth* 4.4. [10]Hendriksen, 432–33.

[11]William Barclay, *The Gospel of Matthew,* vol. 1, 2d ed., The Daily Study Bible (Philadelphia: Westminster Press, 1958), 353. [12]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 140. [13]Hare, 106. [14]ಹೋಲಿಕೆಯಾಗಿರುವ ಕಥೆಗಾಗಿ ಯೆರಿಕೋವಿನಿಂದ ತೆಗೆದುಕೊಳ್ಳಲಾಗಿದೆ, ನೋಡಿರಿ ಮತ್ತಾಯ 20:29-34; ಮಾರ್ಕ 10:46-52; ಲೂಕ 18:35-43. [15]Hagner, 252. [16]D. A. Carson, *When Jesus Confronts the World: An Exposition of Matthew 8—10* (Grand Rapids, Mich.: Baker Book House, 1987), 100. [17]R. T. France, *The Gospel According to Matthew,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 174. [18]Josephus *Life* 45. [19]Hagner, 260.